ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ


ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 227 Pages : 4 Price : 3.00 Saturday October 14, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 14 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 3 ಬಣ್ಣದ ನಗರ, ಕುಂಬಾರ್ ಓಣಿ, ಮಿಷ್ಕಿನ್ ಕಾಂಪೌಂಡ್, ಮಿಷ್ಕಿನ್ ಅವರ ಲೈನ್, ಜನಿಸಾಬ್ ಮಸೀದಿ ಲೈನ್, ಮೇರವಾಡೆ ಲೈನ್,

ವಾರ್ಡ್ ನಂ. 22 ಅಮರೇಶ್ವರ ನಗರ ಭಾಗ 1, 2, 3, 4, 5, 6, 7, ವಾರ್ಡ್ ನಂ. 24, 25, 19 ಕುರುಬರ ಗರಡಿ, ಮಾಬು ಸುಬಾನಿ ಕಟ್ಟಿ, ಕೊಪ್ಪದವರ್ ಲೈನ್ ಖಾನ್‌ತೋಟ ಭಾಗ 1, ಹಾಳದಿಬ್ಬ ಭಾಗ-1,2,3 ಅಬ್ಬಿಗೇರಿ ಲೈನ್, ಕರುಗಲ್ ಓಣಿ, ಪುಣೇಕರ ಲೈನ್, ಕರಿ ದೇವರ ಗುಡಿ, ಜಿಎಸ್ ಹಿರೇಮಠ್ ಲೈನ್, ಜಿರ್ ಓಣಿ, ಗಣಪತಿ ಗುಡಿ, ಹನುಮಾನ ಗರಡಿ, ಗೌಳಿಬಜಾರ್,

ವಾರ್ಡ್ ನಂ. 16 ಹೊಂಬಳ ನಾಕಾ, ಜನತಾ ಕಾಲೋನಿ, ಮಣ್ಣಮ್ಮನವರ ಲೈನ್, ಶೌಚಾಲಯದ ಹಿಂದಿನ ಭಾಗ, ಅಡ್ಡೆದ ಲೈನ್, ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 5, 6 ಪೆಂಡಾರ ಓಣಿ, ಮಲ್ಲೇಶಪ್ಪನ ಲೈನ, ನಂದರಗಿಯವರ ಲೈನ್, ಗಟ್ಟಿಯವರ ಲೈನ್, ಬಚ್ಚಲಕ್ಕಮ್ಮನ ಗುಡಿ ಲೈನ್, ಚನ್ನೇಗೌಡರ ಓಣಿ, ಹುಚ್ಚನಗೌಡ್ರು ಲೈನ್ ಕೆಲವು ಉಳಿದ ಭಾಗಗಳು, ವಾರ್ಡ್ ನಂ. 11, 12 ಕರಿಯಮ್ಮನ ಕಲ್ಲು ಬಡಾವಣೆ, ಇರಾನಿ ಕಾಲೋನಿ, ಗಣೇಶ ಗುಡಿ, ಹಳೆ ಪೋಸ್ಟ್ ಆಫೀಸ್ ಲೈನ್, ಹನುಮಂತ ದೇವರ ಗುಡಿ, 16 ನಂಬರ ಸ್ಕೂಲ್, ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

### ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಶೇಖರಗೌಡ ರಾಮತ್ನಾಳ

## ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸಿ





■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳ ಹಕ್ಕುಗಳ ರಕ್ಷಣೆಯ ಜೊತೆಗೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ವಹಿಸಬೇಕು. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿಆರ್‌ಪಿ ಮತ್ತು ಸಿಆರ್‌ಪಿ, ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಿಯಮಿತವಾಗಿ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯೋಜಿಸಬೇಕು. ಸಭೆಯಲ್ಲಿ ಮಕ್ಕಳಿಗೆ ಮೂಲಭೂತ ಸೌಕರ್ಯಗಳ ಒದಗುವಿಕೆ, ಮಕ್ಕಳು ಶಾಲೆಗೆ ಹಾಜರಾಗಿರುವ ವಿವರ, ಆರೋಗ್ಯ ತಪಾಸಣೆ ಕುರಿತು ಚರ್ಚೆ ನಡೆಸಬೇಕು. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಜ ಕಲ್ಯಾಣ, ಪೊಲೀಸ್ ಇಲಾಖೆ, ವಸತಿ ನಿಲಯದ ಮುಖ್ಯಸ್ಥರು, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಜರಿರುವಂತೆ ನೋಡಿಕೊಳ್ಳಬೇಕು.

ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ದೂರು ಪೆಟ್ಟಿಗೆ ಇಡಬೇಕು. ದೂರು ಸಲ್ಲಿಸುವ ಮಕ್ಕಳ ಹೆಸರನ್ನು ಬಹಿರಂಗಪಡಿಸದೇ ಗೌಪ್ಯತೆ ಕಾಪಾಡಿ, ಮಕ್ಕಳಿಗಾಗುವ ಶೋಷಣೆ ಹಾಗೂ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಸಾಮಾಜಿಕ ಕಳಕಳಿಯಿಂದ ಕರ್ತವ್ಯ ನಿರ್ವಹಿಸಬೇಕೆಂದು ನಿರ್ದೇಶನ ನೀಡಿದರು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಮತ್ತೆ ಶಾಲೆಗೆ ಸೇರಿಸುವುದರ ಮೂಲಕ ಅವರನ್ನು ಮುಖ್ಯ ವಾಹಿನಿಗೆ ತರಬೇಕು. ವಿವಿಧ ಕಾರಣಗಳಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳಿಗೆ ಬಾಲಕರ, ಬಾಲಕಿಯರ ಮಂದಿರದಲ್ಲಿ ದಾಖಲಿಸಿ ಅವರಿಗೆ ಮೌಲ್ಯಯುತ ಶಿಕ್ಷಣವನ್ನು ನೀಡಲು ಕ್ರಮ ವಹಿಸಬೇಕು. ಬಾಲ್ಯ ವಿವಾಹಗಳನ್ನು ತಡೆಗಟ್ಟುವುದರ ಜೊತೆಗೆ ಈ ಕುರಿತು ಪ್ರಕರಣ ದಾಖಲಿಸಲು ವಿಳಂಬ ಮಾಡದೇ ಕ್ರಮ ವಹಿಸಬೇಕು.

ಶಾಲಾ ಪಠ್ಯ-ಪುಸ್ತಕದ ಕೊನೆಯ ಪುಟದಲ್ಲಿ ಮಕ್ಕಳ ಹಕ್ಕುಗಳ ಕುರಿತು ಮಾಹಿತಿ ಪ್ರಕಟಿಸಲು ಪಠ್ಯಪುಸ್ತಕ ರಚನಾ ಸಮಿತಿಯೊಂದಿಗೆ ಆಯೋಗವು ಈಗಾಗಲೇ ಚರ್ಚೆ ನಡೆಸಿದ್ದು, ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

> ಪ್ರತಿ ಶಾಲಾ ಕಟ್ಟಡಗಳ ಹಾಗೂ ಕಂಪೌಂಡ್ ಮೇಲೆ ಮಕ್ಕಳ ಸಹಾಯವಾಣಿ 1098 ಬರಹವನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚನೆ ಮಾಡಬೇಕು. ಪ್ರತಿಯೊಬ್ಬರೂ ತಮ್ಮ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ಕುರಿತು ಇರುವ ಕಾನೂನುಗಳ ಅರಿವು ಮೂಡಿಸಬೇಕು. ಯಾವುದೇ ಕಾರಣಕ್ಕೂ ಮಕ್ಕಳ ಹಕ್ಕುಗಳ ಸಭೆಗಳನ್ನು ನಿರ್ಲಕ್ಷಿಸಬಾರದು. ಎಲ್ಲ ಶಾಲೆಗಳಲ್ಲಿಯೂ ಆರ್‌ಟಿಇ ಕಾಯ್ದೆ ಸಂಪೂರ್ಣವಾಗಿ ಸದ್ಬಳಕೆಯಾಗಬೇಕು.
>
> **- ಶೇಖರಗೌಡ ರಾಮತ್ನಾಳ.**
> ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು.

ಸಭೆಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರವಿ ಗುಂಜೀಕರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಮಣ್ಣೂರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಮಿತ ಬಿದರಿ, ಬಾಲ ನ್ಯಾಯ ಮಂಡಳಿಯ ಸದಸ್ಯ ಜೆ.ಸಿ ರೇಶ್ಮೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿಆರ್‌ಪಿ, ಸಿಆರ್‌ಪಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

### ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಶ್ರೀಗಳಿಗೆ ಭಕ್ತಾದಿಗಳಿಂದ ಗೌರವ ಸಮರ್ಪಣೆ

## ದಸರಾ ಧರ್ಮ ಸಮ್ಮೇಳನ ಗದುಗಿನಲ್ಲಿಯೂ ನಡೆಯುವಂತಾಗಲಿ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಯಚೂರು ಜಿಲ್ಲೆಯ ಲಿಂಗಸುಗೂರು ನಗರದಲ್ಲಿ ಅ.15ರಿಂದ 24ರವರೆಗೆ ನಡೆಯಲಿರುವ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನಕ್ಕೆ ಗದಗ ಮಾರ್ಗವಾಗಿ ಪ್ರಯಾಣ ಬೆಳೆಸಿದ್ದ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಜ.ಪ್ರಸನ್ನ ರೇಣುಕ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರನ್ನು ಗದುಗಿನ ಭಕ್ತಾಧಿಗಳು ಗೌರವ ಸಮರ್ಪಣೆಗೈದು ಭಕ್ತಿಯಿಂದ ಬೀಳ್ಕೊಟ್ಟರು.

ಶುಕ್ರವಾರ ನಗರದ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದ ಆವರಣದಲ್ಲಿ ಏರ್ಪಡಿಸಿದ್ದ ಔಪಚಾರಿಕ ಕಾರ್ಯಕ್ರಮದಲ್ಲಿ ಗದುಗಿನ ಮಾಜಿ ಶಾಸಕ ಡಿ.ಆರ್ ಪಾಟೀಲ ಅವರು ಸರ್ವ ಭಕ್ತಾಧಿಗಳ ಪರವಾಗಿ ಗುರು ವಂದನೆ ಸಲ್ಲಿಸಿದರು.

ಬಹು ವರ್ಷಗಳ ಹಿಂದೆ ಗದುಗಿನಲ್ಲಿ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನ ವೈಭವದೊಂದಿಗೆ ಆಚರಿಸಿದ್ದು ಇತಿಹಾಸವಾಗಿದೆ. ಅಂತಹ ದಸರಾ ಧರ್ಮ ಸಮ್ಮೇಳನ ಗದುಗಿನಲ್ಲಿ ಮುಂಬರುವ ವರ್ಷಗಳಲ್ಲಿ ನಡೆಯುವಂತಾಗಲಿ, ಭಕ್ತಾಧಿಗಳ ಮನವಿಗೆ ಪೂಜ್ಯರು ಅಪ್ಪಣೆ ನೀಡಬೇಕೆಂದು ಡಿ.ಆರ್ ಪಾಟೀಲ ಭಿನ್ನವಿಸಿಕೊಂಡರು.

> ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಈಶಣ್ಣ ಮುನವಳ್ಳಿ ಮಾತನಾಡಿ, ಪೂಜ್ಯರಿಂದ ನಡೆಯಲಿರುವ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನ ನಮ್ಮೆಲ್ಲರಿಗೆ ಹಿತೋಪದೇಶ, ಸನ್ಮಾರ್ಗ ನೀಡುವಂತಾಗಲಿ ಎಂದರು. ಪೂಜ್ಯರು ಸರ್ವ ಭಕ್ತಾಧಿಗಳಿಗೆ ಆಶೀರ್ವದಿಸಿ, ಲಿಂಗಸುಗೂರಿನ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದ ಕಾರ್ಯದರ್ಶಿ ಚಂದ್ರು ಬಾಳಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಂಗಲ್ಯ ಮಂದಿರದ ಕಾರ್ಯಾಧ್ಯಕ್ಷ ಅಜ್ಜಣ್ಣ ಮಲ್ಲಾಡದ, ಪಂಚಾಚಾರ್ಯ ವೀರಶೈವ ಪಂಚಮಸಾಲಿ ಸಮಿತಿಯ ಅಧ್ಯಕ್ಷ ಮಹೇಶಚಂದ್ರ ಕಬಾಡರ, ನಗರಸಭಾ ಸದಸ್ಯ ಅನಿಲ ಅಬ್ಬಿಗೇರಿ, ವೀರೇಶ ಕೂಗು, ರಾಜಣ್ಣ ಗುಡಿಮನಿ, ಮಹಾದೇವಯ್ಯ ಧನ್ನೂರಹಿರೇಮಠ, ಉಮಾಪತಿ ಭೂಸನೂರಮಠ, ಪ್ರಕಾಶ ಬೇಲಿ, ಮಹೇಶ ಶಾಬಾದಿಮಠ, ನಾಗೇಶ ಹುಬ್ಬಳ್ಳಿ, ಅಶೋಕ ಪಾಟೀಲ, ಮಂಜುನಾಥ ಚನ್ನಪ್ಪನವರ, ತಾತನಗೌಡ ಪಾಟೀಲ, ಶಿವಯ್ಯ ನಾಲತ್ವಾಡಮಠ, ಮಲ್ಲಿಕಾರ್ಜುನ ಶಿಗ್ಗಿ, ಬಸವರಾಜ ಕೂಗು, ಮದುಸೂಧನ ಪುಣೇಕರ, ಸದಾಶಿವಯ್ಯ ಮದರಿಮಠ, ಶರಣಯ್ಯ ಶಾಸ್ತ್ರೀ ಶಿವಪ್ಪಯ್ಯನಮಠ, ಹರೀಶ ಶಹಾ, ಶಂಕರ ಗಡಾದ, ಗುರಣ್ಣ ಬಳಗಾನೂರ, ಪ್ರಕಾಶ ಉಗಲಾಟದ, ಶರಣಯ್ಯ ಜುಕ್ತಿಮಠ, ಶಿವಾನಂದಯ್ಯ ಹಿರೇಮಠ, ಅಮರನಾಥ ಗಡಗಿ, ರಾಜಣ್ಣ ಮಲ್ಲಾಡದ ಮುಂತಾದವರಿದ್ದರು.

## ಕನ್ನಡ ರಾಜ್ಯೋತ್ಸವ ವ್ಯವಸ್ಥಿತವಾಗಿ ಆಚರಿಸಲು ಸೂಚನೆ

■ ವಿಜಯಸಾಕ್ಷಿ ಸುದ್ದಿ, ಗದಗ

ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದರು.



ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಕನ್ನಡ ರಾಜ್ಯೋತ್ಸವ ಆಚರಣೆಯ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯೋತ್ಸವದ ನಿಮಿತ್ತ ನವೆಂಬರ್ 1 ರಂದು ಬೆಳಿಗ್ಗೆ 8.15 ಗಂಟೆಗೆ ಗದಗ ಬೆಟಗೇರಿ ನಗರಸಭೆ ಹೈಸ್ಕೂಲ್ ಮೈದಾನದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜಾ ಕಾರ್ಯಕ್ರಮ ಜರುಗಲಿದೆ. ನಂತರ ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಕ್ರೀಡಾಂಗಣದಲ್ಲಿ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮವು ಜರುಗಲಿದೆ. ಕಾರ್ಯಕ್ರಮಕ್ಕೆ ಎಲ್ಲ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು.

ರಾಜ್ಯೋತ್ಸವದ ಪ್ರಯುಕ್ತ ಸರ್ಕಾರಿ ಕಚೇರಿ, ಕಟ್ಟಡಗಳ ಹಾಗೂ ನಗರದ ಪ್ರಮುಖ ವೃತ್ತಗಳಲ್ಲಿ ರಾಜ್ಯೋತ್ಸವದ ದಿನ ನವೆಂಬರ್ 1 ಹಾಗೂ ಅದರ ಹಿಂದಿನ ದಿನ ಅಕ್ಟೋಬರ್ 31 ರಂದು ಎರಡು ದಿನ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆಗೆ ಕ್ರಮ ವಹಿಸಬೇಕು. ಕಾರ್ಯಕ್ರಮದ ಸ್ಥಳದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಶಿಷ್ಟಾಚಾರದನ್ವಯ ವೇದಿಕೆಯ ಆಸನಗಳ ವ್ಯವಸ್ಥೆ , ವೇದಿಕೆ ವ್ಯವಸ್ಥೆಗೆ ಸೂಕ್ತ ಕ್ರಮ ಜರುಗಿಸಬೇಕು. ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಲಘು ಉಪಹಾರ ಹಾಗೂ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕು. ಒಟ್ಟಾರೆಯಾಗಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷಗಳಾಗದಂತೆ ವ್ಯವಸ್ಥಿತವಾಗಿ ಆಚರಿಸಲು ನಿಗಾ ವಹಿಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಮಾತನಾಡಿ, ರಾಜ್ಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸಿದ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುವ ಕಾರ್ಯಕ್ರಮವಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಕೂಡ ಸನ್ಮಾನ ಜರುಗಲಿದ್ದು, ಸಂಬಂಧಿತ ಇಲಾಖೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಹಾಜರಿದ್ದರು.

### ಗದಗ ಜಿಲ್ಲಾ ಟೇಲರ್ಸ್ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾಧಿಕಾರಿಗಳಿಗೆ ಮನವಿ

## 'ಟೇಲರ್ಸ್ ಕ್ಷೇಮನಿಧಿ' ನಿಗಮ ಮಂಡಳಿ ಸ್ಥಾಪಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಶುಕ್ರವಾರ ನಗರದ ಮುನ್ಸಿಪಲ್ ಕಾಲೇಜು ಆವರಣದಿಂದ ಜಿಲ್ಲಾಧಿಕಾರಿ ಕಛೇರಿಗೆ ಕಾಲ್ನಡಿಗೆ ಮೂಲಕ 500ಕ್ಕೂ ಹೆಚ್ಚು ಜನರು ಸೇರಿದಂತೆ ಗದಗ ಜಿಲ್ಲಾ ಟೇಲರ್ಸ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ತೆರಳಿ, ಗದಗ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಕಾರ್ಮಿಕ ಇಲಾಖೆಯ ಸಚಿವರಾದ ಸಂತೋಷ ಎಸ್.ಲಾಡ್ ಅವರಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಅಶ್ವಥ್ ಎ.ಸುಲಾಖೆ ಮಾತನಾಡಿ, ಗದಗ ಜಿಲ್ಲೆಯಾದ್ಯಂತ 30 ಸಾವಿರಕ್ಕೂ ಅಧಿಕ ಟೇಲರ್‌ಗಳಿದ್ದು, ನಮಗೆ ಈವರೆಗೂ ಯಾವದೇ ರೀತಿಯ ಸಾಮಾಜಿಕ ಭದ್ರತೆ ಕಲ್ಪಿಸಿಲ್ಲ. ಈಗಿನ ರೆಡಿಮೇಡ್ ಜಗತ್ತಿನಲ್ಲಿ ಟೇಲರ್‌ಗಳಿಗೆ ಆರ್ಥಿಕ ಭದ್ರತೆ ಇಲ್ಲದೆ ಅಸಹಾಯಕರಾಗಿ ಜೀವನ ನಡೆಸುವಂತಾಗಿದೆ.

ಕೇರಳದಲ್ಲಿ ಹೊಲಿಗೆ ಕಾರ್ಮಿಕರಿಗೆ ಕೇರಳ ಸರ್ಕಾರ 'ಟೇಲರ್ಸ್ ಕ್ಷೇಮನಿಧಿ' ನಿಗಮ ಮಂಡಳಿ ಸ್ಥಾಪಿಸಿ ಹೊಲಿಗೆ ವೃತ್ತಿಯವರಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿದೆ. ಕರ್ನಾಟಕದಲ್ಲಿಯೂ ಟೇಲರ್‌ಗಳಿಗಾಗಿ ನಿಗಮ ಮಂಡಳಿ ಸ್ಥಾಪಿಸಿ ಸಾಮಾಜಿಕ, ಆರ್ಥಿಕ ಭದ್ರತೆ ನೀಡಬೇಕೆಂದು ಮನವಿ ಮಾಡಿದರು.


ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸರಕಾರದಿಂದ ಟೈಲರ್ ಭವನ ನಿರ್ಮಾಣಕ್ಕೆ ಅನುದಾನ ನೀಡಬೇಕು, ಜಿಲ್ಲೆಯಲ್ಲಿ ಟೈಲರ್ ಕ್ಷೇಮನಿಧಿ ಮಂಡಳಿಯನ್ನು ರಚಿಸಬೇಕು, ಪ್ರತೀ ಸದಸ್ಯನಿಗೆ ಸರಕಾರ 5 ಲಕ್ಷ ರೂಪಾಯಿ ಅನುದಾನ ನೀಡಬೇಕು, ನಿವೃತ್ತಿ ಹೊಂದಿದ ಟೇಲರ್‌ಗಳಿಗೆ 3 ಸಾವಿರ ರೂ ನಿವೃತ್ತಿ ವೇತನ ನೀಡಬೇಕು, ಸರಕಾರದಿಂದ ನಿವೇಶನ ಹಾಗೂ ಆಶ್ರಯ ಮನೆಗಳನ್ನು ನೀಡಬೇಕು ಇವೇ ಮುಂತಾದ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವಂತೆ ನವಿ ಸಲ್ಲಿಸಿದರು.


ಈ ಸಂದರ್ಭದಲ್ಲಿ ಸಾಮಾಜಿಕ ಹೋರಾಟಗಾರ ರವಿಕಾಂತ ಅಂಗಡಿ, ಎಂ.ಜಿ ಪಾಟೀಲ, ಶಿವಾಜಿಸಿಂಗ್ ರಜಪೂತ, ದ್ಯಾಮಣ್ಣ ಮಡಿವಾಳರ, ಯೂಸುಫ್ ಖಾನ್ ಉಸ್ತಾದ್, ನಜೀರ್ ಅಹ್ಮದ್ ಖತೀಬ, ಆರ್.ಎನ್ ಮೇಘರಾಜ, ಮಾರುತಿ ಬೆಂಚಹಳ್ಳಿ, ಹಸನ್ ಕಲೆಗಾರ, ಸಬೀಲ ಅಹ್ಮದ್ ಶೇಖ, ಗವಿಸಿದ್ಧಯ್ಯ ಹಳ್ಳಿಕೇರಿಮಠ ಹಾಗೂ ಮಹಿಳಾ ಟೇಲರ್‌ಗಳು ಹಾಜರಿದ್ದರು.

### ಸ್ಮಾರಕಗಳ ದತ್ತು ಪ್ರಕ್ರಿಯೆಗೆ ಸಚಿವ ಎಚ್.ಕೆ. ಪಾಟೀಲ್ ಚಾಲನೆ

## ಅನಿವಾಸಿ ಭಾರತೀಯ ಕನ್ನಡಿಗರೊಂದಿಗೆ ಯಶಸ್ವಿ ಮಾತುಕತೆ





■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಯ ಮಹತ್ವಾಕಾಂಕ್ಷಿ "ಸ್ಮಾರಕ ದತ್ತು" ಯೋಜನೆ ಯಶಸ್ಸಿಗಾಗಿ ಸಚಿವ ಎಚ್.ಕೆ. ಪಾಟೀಲ್ ಅವರು ಜಾಗತಿಕ ಸಮೂಹವನ್ನು ಸೆಳೆಯುವ ಸಲುವಾಗಿ ಅಂತಾರಾಷ್ಟ್ರೀಯ ಮಟ್ಟದ ಸಭೆ ನಡೆಸಿದರು.

ಕಳೆದ ಸೆಪ್ಟೆಂಬರ್ 25 ರಂದು ಸ್ಮಾರಕಗಳ ದತ್ತು ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದರು. ಈ ಯೋಜನೆ ಯಶಸ್ಸಿಗೆ ಅನುಕೂಲವಾಗುವಂತೆ ಪ್ರವಾಸೋದ್ಯಮ, ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ್ ಅವರು ಆನಿವಾಸಿ ಭಾರತೀಯ ಕನ್ನಡಿಗರೊಂದಿಗೆ ಮಹತ್ವದ ಸಮಾಲೋಚನಾ ಸಭೆ ನಡೆಸಿದರು.

ಬಹು ವರ್ಷಗಳ ಹಿಂದೆ ಕರುನಾಡನ್ನು ತೊರೆದು ಇದೀಗ ಅಮೇರಿಕಾದ ವಿವಿಧ ಬೃಹತ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸಂಸ್ಥೆಗಳ ಮಾಲೀಕರಾಗಿ ದೇಶದ ಹಿರಿಮೆ ಸಾರಿರುವ ಆನಿವಾಸಿ ಭಾರತೀಯ ಕನ್ನಡಿಗರೊಂದಿಗೆ ಜೂಮ್ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಸಭೆಯಲ್ಲಿ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ರಾಜ್ಯದ ಸ್ಮಾರಕ ದತ್ತು ಯೋಜನೆ ಉದ್ದೇಶವನ್ನು ▸▸ 3ನೇ ಪುಟಕ್ಕೆ

> "ಇತಿಹಾಸ ತಿಳಿದರೆ ಇತಿಹಾಸ ಸೃಷ್ಟಿಸಬಹುದು, ಇತಿಹಾಸವನ್ನು ಹೇಳುವ ನಮ್ಮ ಸ್ಮಾರಕಗಳು ಅದ್ಭುತ ಮೌಲ್ಯಗಳಿರುವಂತಹವು. ನಮ್ಮ ಪರಂಪರೆ ಸಾರುವ ಈ ನಮ್ಮ ಸ್ಮಾರಕಗಳು ನಮ್ಮತನದ ಜತೆಗೆ ನಮ್ಮೆಲ್ಲರ ಅಭಿಮಾನ- ಗರ್ವದ ಪ್ರತೀಕ. ಈ ಸ್ಮಾರಕಗಳನ್ನು ದತ್ತು ಪಡೆಯಲು ನಮ್ಮವರಾದವರು ಮುಂದೆ ಬರಬೇಕು."
>
> **-ಎಚ್.ಕೆ. ಪಾಟೀಲ್,** ಸಚಿವರು, ಪ್ರವಾಸೋದ್ಯಮ ಮತ್ತು ಸಂಸದೀಯ ವ್ಯವಹಾರಗಳ ಖಾತೆ

## ಫುಟ್‌ಪಾತ್ ಅತಿಕ್ರಮಿಸಿದ್ದ ಅಂಗಡಿಗಳ ತೆರವು



■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ


ಪಟ್ಟಣದಲ್ಲಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡಚಣೆ ಮಾಡುತ್ತಿದ್ದ ಫುಟ್‌ಪಾತ್ ಅಂಗಡಿಗಳನ್ನು ತೆರವು ಮಾಡುವಂತೆ ಪುರಸಭೆ ಮೇಲಿಂದ ಮೇಲೆ ಸೂಚನೆ ಕೊಟ್ಟಿದ್ದರೂ ಲಕ್ಷ್ಯವಹಿಸದಿರುವುದನ್ನು ಗಂಭೀರವಾಗಿ ಪರಿಗಣಿಸಿ ಶುಕ್ರವಾರ ಅಧಿಕಾರಿಗಳು ವ್ಯಾಪಾರಸ್ಥರ ಅಂಗಡಿಗಳನ್ನು ತೆರವುಗೊಳಿಸಿದರು.

ಪಾದಚಾರಿಗಳ ಮಾರ್ಗ ತೆರವುಗೊಳಿಸುವಂತೆ ಪುರಸಭೆ ವಾಹನಗಳ ಧ್ವನಿವರ್ಧಕದ ಮೂಲಕ ಬಹಿರಂಗ ಸೂಚನೆ ನೀಡಲಾಗಿತ್ತು. ಆದರೂ ಒತ್ತುವರಿದಾರರು ನಿರ್ಲಕ್ಷ್ಯ ಮಾಡಿದ್ದರು. ಶುಕ್ರವಾರ ಪುರಸಭೆ ಸಿಬ್ಬಂದಿಗಳು ಬೆಳಿಗ್ಗೆ 8 ಗಂಟೆಗೆ ಆಗಮಿಸಿ, ಪಾದಚಾರಿ ಮಾರ್ಗ ತೆರವು ಕಾರ್ಯ ಕೈಗೊಂಡರು.

ಪಟ್ಟಣದ ಜೆಸಿಐ ವೃತ್ತ ಸಮೀಪದ ಹಣ್ಣಿನ ಅಂಗಡಿಯವರು ಅಂಗಡಿ ತೆರವುಗೊಳಿಸಲು ನಿರಾಕರಿಸಿದರು. ಅವರಿಗೆ ಸಂಜೆಯೊಳಗೆ ಸ್ಥಳಾಂತರಿಸುವ ಗಡುವು ನೀಡಲಾಯಿತು. ಪಾದಚಾರಿ ಮಾರ್ಗ ಒತ್ತುವರಿಯಿಂದ ಜನರು, ವಿದ್ಯಾರ್ಥಿಗಳು ಮುಖ್ಯರಸ್ತೆಯಲ್ಲಿ ಓಡಾಡುವಂತಾಗಿದ್ದು, ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಅಪಘಾತಗಳಿಗೂ ಕಾರಣವಾಗುತ್ತಿದ್ದು, ತೆರವುಗೊಳಿಸುವಂತೆ ಕೆಲವರು ಜನತಾ ದರ್ಶನದಲ್ಲಿ ದೂರು ಸಲ್ಲಿಸಿದ್ದರು. ಇದನ್ನು ಆಧರಿಸಿ ಅತಿಕ್ರಮಣಕಾರರಿಗೆ ಸೂಚನೆ ಕೊಟ್ಟು ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ಹೇಳಿದರು.

## ಹಿರಿಯ ಪತ್ರಕರ್ತ ಕೆಎಸ್ ಸಚ್ಚಿದಾನಂದ ಮೂರ್ತಿ ನಿಧನ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ದಿ ವೀಕ್ ನಿಯತಕಾಲಿಕೆ ಮತ್ತು ಮಲಯಾಳ ಮನೋರಮಾ ದೈನಿಕದ ದೆಹಲಿ ರೆಸಿಡೆಂಟ್ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಕರ್ತ ಕೆಎಸ್ ಸಚ್ಚಿದಾನಂದ ಮೂರ್ತಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾಗಿದ್ದಾರೆ.

68 ವರ್ಷದ ಅವರು ಇತ್ತೀಚೆಗೆ ಶ್ವಾಸಕೋಶದ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು ಮತ್ತು ಕಳೆದ ಕೆಲವು ದಿನಗಳಿಂದ ವೆಂಟಿಲೇಟರ್‌ನಲ್ಲಿದ್ದರು ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಸ್ನೇಹಿತರಲ್ಲಿ ಮತ್ತು ಮಾಧ್ಯಮ ರಂಗದಲ್ಲಿ 'ಸಚ್ಚಿ' ಎಂದೇ ಜನಪ್ರಿಯವಾಗಿದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಅವರು ಮೂಲತಃ ಕೋಲಾರ ಜಿಲ್ಲೆಯ ಅಷ್ಟಗ್ರಾಮ ಎಂಬ ಗ್ರಾಮಕ್ಕೆ ಸೇರಿದವರು.

ಸಚ್ಚಿದಾನಂದ ಮೂರ್ತಿ ಅವರು 1982ರ ನವೆಂಬರ್‌ನಲ್ಲಿ 'ದಿ ವೀಕ್'ನ ಬೆಂಗಳೂರು ವರದಿಗಾರರಾಗಿ ಕೆಲಸಕ್ಕೆ ಸೇರಿಕೊಂಡರು ಮತ್ತು 2022ರ ಸೆಪ್ಟೆಂಬರ್‌ನಲ್ಲಿ ಅವರು ನಿವೃತ್ತರಾಗುವವರೆಗೂ ಮಲಯಾಳ ಮನೋರಮಾ ಗುಂಪಿನಲ್ಲಿ ಇದ್ದರು ಎಂದು ಪತ್ರಿಕೆ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

1989ರ ಫೆಬ್ರವರಿಯಲ್ಲಿ ಅವರು ಬೆಂಗಳೂರಿನಲ್ಲಿ ಪತ್ರಿಕೆಯ ವಿಶೇಷ ವರದಿಗಾರರಾದರು ಮತ್ತು 1990ರ ಏಪ್ರಿಲ್‌ನಲ್ಲಿ ರಾಷ್ಟ್ರ ರಾಜಧಾನಿ ಬ್ಯೂರೋದ ಮುಖ್ಯಸ್ಥರಾಗಿ ದೆಹಲಿಗೆ ತೆರಳಿದರು. ದಿ ವೀಕ್ ಪ್ರಕಾರ, 2000ರ ಏಪ್ರಿಲ್‌ನಲ್ಲಿ ಅವರನ್ನು ಸ್ಥಾನೀಯ ಸಂಪಾದಕರನ್ನಾಗಿ ನೇಮಿಸಲಾಯಿತು.

ಮೂರ್ತಿ ಅವರ ನಿಧನಕ್ಕೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಆತ್ಮೀಯ ಗೆಳೆಯ ಮತ್ತು ಹಿತೈಷಿ ಎಂದು ಸ್ಮರಿಸಿದ್ದಾರೆ.

'ಹಿರಿಯ ಪತ್ರಕರ್ತ, 'ಮಲಯಾಳ ಮನೋರಮಾ' ಮತ್ತು 'ದಿ ವೀಕ್' ಪತ್ರಿಕೆಗಳ ಮಾಜಿ ಸ್ಥಾನೀಯ ಸಂಪಾದಕರಾಗಿದ್ದ ಕೆಎಸ್ ಸಚ್ಚಿದಾನಂದ ಮೂರ್ತಿ ಅವರ ಸಾವಿನಿಂದ ಆಘಾತಕ್ಕೀಡಾಗಿದ್ದೇನೆ. ನನಗೆ ಆತ್ಮೀಯರು ಮತ್ತು ಹಿತೈಷಿಗಳಾಗಿದ್ದ ಸಚ್ಚಿದಾನಂದಮೂರ್ತಿಯವರು ದೆಹಲಿಯ ಮಾಧ್ಯಮರಂಗದಲ್ಲಿ ಸಕ್ರಿಯರಾಗಿದ್ದ ಕೆಲವೇ ಕೆಲವು ಹಿರಿಯ ಕನ್ನಡಿಗ ಪತ್ರಕರ್ತರಲ್ಲಿ ಒಬ್ಬರಾಗಿದ್ದರು.

## ಅತ್ಯಾಚಾರ ಪ್ರಕರಣದಲ್ಲಿ ದಂತವೈದ್ಯನ ಬಂಧನ

■ವಿಜಯಸಾಕ್ಷಿ ಸುದ್ದಿ, ಹಾವೇರಿ

ತನ್ನೊಂದಿಗೆ ಕೆಲಸ ಮಾಡುತ್ತಿದ್ದ ನರ್ಸ್ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ದಂತವೈದ್ಯನೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, 24 ವರ್ಷದ ನರ್ಸ್ ದಂತ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಡಾ. ವಿಜಯ್ ಕುಮಾರ್ ಸಹ ಅದೇ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದು ಇಬ್ಬರು ಪರಸ್ಪರ ಪ್ರೀತಿಸಿ ಸಂಬಂಧ ಬೆಳೆಸಿಕೊಂಡಿದ್ದರು.

ಆರೋಪಿ ವಿಜಯ್ ಕುಮಾರ್ ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿದ್ದು ತನ್ನನ್ನು ಮೂರು ಬಾರಿ ಗರ್ಭಪಾತ ಮಾಡಿದ್ದಾನೆ. ಆದರೆ ನಂತರ ಮದುವೆಯಾಗಲು ನಿರಾಕರಿಸಿದ ಹಿನ್ನೆಲೆಯಲ್ಲಿ ಮಹಿಳೆಗೆ ಪೊಲೀಸರಿಗೆ ದೂರು ನೀಡಿದ್ದಾರೆ.

ಇನ್ನು ಪೊಲೀಸರಿಗೆ ದೂರು ನೀಡದಂತೆ ಆರೋಪಿ 1 ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಹೇಳಿ ರಾಜಿ ಸಂಧಾನಕ್ಕೆ ಯತ್ನಿಸಿದ್ದನು ಎಂದು ಆರೋಪಿಸಿದ್ದಾರೆ. ಮಹಿಳೆ ತಾನು ವೈದ್ಯಕೀಯ ಪರೀಕ್ಷೆಗೆ ಸಿದ್ಧವಿದ್ದು, ಆರೋಪಿಯನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ರಾಣೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545


**ಪುಸ್ತಕ ಪರಿಚಯ**

### ನಮ್ಮಲ್ಲಿ ಯಾವುದೇ ಭೇದ-ಭಾವ ಇಲ್ಲ ಎಂದು ಹೇಳುವುದು ಎಷ್ಟು ಸರಿ?

# 'ಆಚರಣೆಯಲ್ಲಿ ಅಡಗಿರುವ ಅನಾಚಾರ'ದ ಸುತ್ತ

'ಮಾನವ ಕುಲಂ ತಾನೊಂದೇ ವಲಂ' ಎಂಬ ಕವಿ ಶ್ರೇಷ್ಠರ ವಾಣಿಯನ್ನು ಈ ಸಂದರ್ಭದಲ್ಲಿ ಸ್ಮರಿಸದಿದ್ದರೆ ತಪ್ಪಾದೀತು. ಯಾಕೆಂದರೆ ನಮ್ಮ ನಾಡು ಅನೇಕ ಸಂಸ್ಕೃತಿ-ಸಂಪ್ರದಾಯ, ರೀತಿ-ನೀತಿ, ಪದ್ಧತಿ, ಆಚರಣೆಗಳ ಅನುಪಮ ಸಂಗಮ ಹಾಗೂ ಸಮ್ಮಿಳಿತವಾಗಿದೆ. ಪ್ರಾದೇಶಿಕವಾಗಿ ತನ್ನದೇ ಆದ ವಿಶಿಷ್ಟ ಆಚರಣೆಗಳ ಮೂಲಕ ಸನಾತನ ಕಾಲದಿಂದಲೂ ತನ್ನ ಸಂಸ್ಕೃತಿಯನ್ನು ಎತ್ತಿ ಹಿಡಿದಿದೆ. ವಿವಿಧ ಜಾತಿ, ಮತ, ಧರ್ಮ, ಪಂಥಗಳ ಹಿನ್ನೆಲೆಯಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಮೆರೆದಿದೆ.

ನಮ್ಮ ಮಣ್ಣಿನ ಸೊಗಡಿನ ನೆಲೆಯಲ್ಲಿ ಅನೂಚಾನವಾಗಿ ಬೆಳೆದು ಬಂದಿರುವ ಹಬ್ಬಗಳ ಆಚರಣೆ, ಅವುಗಳ ಹಿನ್ನೆಲೆ, ಅವುಗಳ ಮೂಲ ಇತಿಹಾಸ ತಿಳಿಯುವ, ತಿಳಿಸುವ ಪ್ರಯತ್ನವಂತೂ ಶ್ಲಾಘನೀಯವೇ ಸರಿ. ನಮ್ಮ ಸಮಾಜ, ಸಮುದಾಯವು ಶ್ರೇಣಿಕೃತ ವ್ಯವಸ್ಥೆಯನ್ನು ಹೊಂದಿದ್ದು ಬಲಿಷ್ಠರು ಕನಿಷ್ಠರ ಮೇಲೆ ತಲೆತಲಾಂತರದಿಂದ ಶೋಷಣೆ ಮಾಡುತ್ತಲೇ ಬಂದಿರುವ ಚಿತ್ರಣವನ್ನು ಕಣ್ಮುಂದೆ ತಂದಿದ್ದಾರೆ ಬರಹಗಾರ ಈರಪ್ಪ ಮಾದರ. ಆರಂಭದಲ್ಲಿ ಗ್ರಂಥ ಋಣದ ಹೊಣೆ ಹೊತ್ತ ಪಿ.ಆರ್ ಹಿರೇಮಠ ಅವರಿಗೆ





ಗ್ರಂಥವನ್ನು ಸಮರ್ಪಿಸಿ ಸ್ಮರಿಸಿದ್ದಾರೆ.

'ವಸುದೈವ ಕುಟುಂಬಕಂ' ಎನ್ನುವ ಮಾತಿನಂತೆ ಈ ಭೂಮಿಯ ಮೇಲಿರುವ ಎಲ್ಲಾ ಸ್ಥರದ ಎಲ್ಲಾ ವರ್ಗದ ಜನರು ಒಂದೇ ಕುಟುಂಬದವರಿದ್ದಂತೆ, ನಮ್ಮಲ್ಲಿ ಯಾವುದೇ ಭೇದ-ಭಾವ ಇಲ್ಲ ಎಂದು ಹೇಳುವುದು ಎಷ್ಟು ಸರಿ? ಸಮಾಜದಲ್ಲಿ ಇಂದಿಗೂ ಕೂಡ ಅಸ್ಪೃಶ್ಯರನ್ನು ಕೀಳಾಗಿ ಕಾಣುವುದೇ ಇದಕ್ಕೆ ಸಾಕ್ಷಿ. ಉಳಿವಿಗಾಗಿ ಹೋರಾಟ, ಬದುಕಿಗಾಗಿ ಬಳಲಾಟ, ಹೇಳಿಕೊಳ್ಳಲಾಗದ ಯಾತನೆಗಳ ತೊಳಲಾಟ, ಕಿತ್ತಾಟ, ಅನಿವಾರ್ಯವಲ್ಲದಿದ್ದರೂ ಅನಿವಾರ್ಯವೆಂಬ ಸಂಕಟ ಸಾಮಾನ್ಯವಾಗಿದೆ. ತಾವು ಬಾಲ್ಯದಲ್ಲಿ ಕಂಡುಂಡ ನೋವು, ಹತಾಶೆ, ನಿರಾಶೆ, ರೋಷಗಳ ತೊಳಲಾಟವನ್ನು ನೇರ ನಿಷ್ಠುರತೆಯಿಂದ ಖಂಡಿಸುವ ವಿಚಾರವಿದ್ದರೂ ಸಮಾಜದವರ ಹಿತ ದೃಷ್ಟಿಯಿಂದ ಬಂದ ಕಷ್ಟಗಳನ್ನು ಸಹಿಸಿಕೊಂಡಿದ್ದಾರೆ. ಮೇಲ್ವರ್ಗದವರ ಅನ್ಯಾಯ, ಅಟ್ಟಹಾಸ, ದೌರ್ಜನ್ಯ, ಕ್ರೌರ್ಯಗಳನ್ನು ಪ್ರತಿಭಟಿಸುವ ಎದೆಗಾರಿಕೆ ಇದ್ದರೂ ಬಡವ ನೀ ಮಡಗಿದಂಗ ಇರು ಎಂಬಂತೆ ಎಲ್ಲವನ್ನು ಕಂಡೂ ಕಾಣದವರಂತೆ ಬಾಲ್ಯ ಕಳೆದವರು.

ಈ ಕೃತಿಯಲ್ಲಿ ಈರಪ್ಪನವರು ಬಳಸಿದ ಪದ ಬಳಕೆ ಪಕ್ಕಾ ಜವಾರಿ ಅಂದರೆ ತಪ್ಪಾಗಲಾರದು. ಇಂತಹ ಸಮಾಜದಲ್ಲಿ ನಾವಿದ್ದೇವೆ ಅಲ್ಲವೇ ಎಂಬ ಭಾವನೆಯನ್ನು ಮೂಡಿಸುತ್ತವೆ. ಜಾತಿಯ ವಿಷ ಬೀಜವನ್ನು ಬಿತ್ತಿ ನೀತಿಯ ಹೇಳಿದರೆ ಏನು ಬಂತು? ಎಂದು ಸಮಾಜವನ್ನು, ಸಮಾಜದಲ್ಲಿರುವವರನ್ನು ಅನೇಕ ಸಂದರ್ಭದಲ್ಲಿ ಚಾಟಿಯ ಏಟನ್ನು ಬೀಸುವಂತೆ ಬೀಸಿದ್ದಾರೆ. ಯಾರು ಏನೆಂದುಕೊಳ್ಳುವರೋ ಎನ್ನುವುದಕ್ಕಿಂತ ಹೇಳಬೇಕಾದ ವಿಚಾರವನ್ನು ನೇರವಾಗಿ ಸ್ಪಷ್ಟಪಡಿಸಿದ್ದಾರೆ.

ಸಮಾಜದ ಅಂಕು ಡೊಂಕುಗಳನ್ನು, ಓರೆ ಕೋರೆಗಳನ್ನು ಮೊನಚಾಗಿ ಕುಟುಕುವ ಪ್ರಯತ್ನ ಮಾಡಿದ್ದಾರೆ. ಮೇಲ್ವರ್ಗದವರು ತಮ್ಮ ಅನುಕೂಲಕ್ಕೆ ತಕ್ಕಂತೆ ರೀತಿ ರಿವಾಜುಗಳನ್ನು ನಿರ್ಮಿಸಿಕೊಂಡು, ಕಾಯ್ದೆ ಕಾನೂನುಗಳನ್ನು ರಚಿಸಿಕೊಂಡು, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ಸಾಕಷ್ಟು ಅನಿಷ್ಟ ಪದ್ಧತಿಗಳ ವಿರುದ್ಧ ಆಕ್ರೋಶದ ಕಿಡಿ ಕಾರಿದ್ದಾರೆ. ಪ್ರತಿಯೊಂದು ಹಬ್ಬದ ಆಚರಣೆಯ ಹಿಂದಿರುವ ಅನಾಚಾರಗಳನ್ನು ಕಣ್ಣಿಗೆ ಕಾಣುವಂತೆ ಕಟ್ಟಿಕೊಟ್ಟಿದ್ದಾರೆ, ಓದುಗರ ಎದುರು ಅನಾವರಣಗೊಳಿಸಿದ್ದಾರೆ.

ಇಲ್ಲಿನ ಒಂದೊಂದು ಪ್ರಸಂಗವೂ ನಾವು ಬಾಲ್ಯದಲ್ಲಿ ನೋಡಿದ, ಕೇಳಿದ, ನಮ್ಮ ಸುತ್ತಮುತ್ತಲ ಸಮಾಜದಲ್ಲಿ ನಡೆದ ಸನ್ನಿವೇಶಗಳಾಗಿವೆ. ಸ್ವಾತಂತ್ರ್ಯ ಪಡೆದು ಇಷ್ಟು ವರ್ಷಗಳಾದರೂ ಇನ್ನೂ ಗುಲಾಮರಂತೆ ಬದುಕುವ ಬದುಕು ನಮಗೇಕೆ ಎಂದು ಪ್ರಶ್ನಿಸಿದ್ದಾರೆ. ಇಲ್ಲಿ ಬಂದಿರುವ ಗಣಪತಿ ಬಪ್ಪ, ದೀಪಾವಳಿ, ಮಹಾನವಮಿ, ಹಲೇ ಹಬ್ಬ, ಹೋಳಿ ಹಬ್ಬ, ಪಂಚಮಿ, ಕಾರ ಹುಣ್ಣಿಮೆ, ಮೈಯಾನ ದೆವ್ವ, ನಿಬ್ನ, ಮೂರು ಬಿಟ್ಟವರು, ನೀರು, ಚಹಾ, ಪರುವು, ದಕ್ಕಲಿಗ, ನಮ್ಮೂರ ಜಾತ್ರೆ ಇನ್ನೂ ಮುಂತಾದ ಶಿರ್ಷಿಕೆಗಳಿಂದ ಕೂಡಿದ ಕೃತಿರತ್ನವು ಅತ್ಯುತ್ತಮವಾಗಿ ಮೂಡಿಬಂದಿದೆ. ಪ್ರತಿಯೊಂದು ಹಬ್ಬದ ವೈಶಿಷ್ಟ್ಯತೆಯನ್ನು ನವಿರಾದ ಹಾಸ್ಯ, ವಿಡಂಬನೆ ಹಾಗೂ ಖಂಡನೆಯ ಮೂಲಕ ಓದುಗರನ್ನು ನಿರರ್ಗಳವಾಗಿ ಓದಿಸಿಕೊಂಡು ಹೋಗುತ್ತದೆ.

ಅಲ್ಲಲ್ಲಿ ತಡೆಹಿಡಿದು ತಾರ್ಕಿಕತೆಗೆ ಅಣಿಮಾಡುತ್ತದೆ. ಈ ಪುಸ್ತಕವನ್ನು ಓದುತ್ತಿದ್ದರೆ ನಾಡಿನ ಹೆಸರಾಂತ ಶ್ರೇಷ್ಠ ಸಾಹಿತಿಗಳ ಪುಸ್ತಕ ಓದಿದ ಅನುಭವವಾಗುತ್ತದೆ. ಸುಲಲಿತವಾದ, ಸರಳವಾದ ಕಥೆ ಕಟ್ಟುವ ಶೈಲಿ ಜೀವನಾನುಭವದ ಸಾರಸರ್ವಸ್ವವಾಗಿದೆ. ಈ ಕೃತಿಯು ಈರಪ್ಪನವರ ಆತ್ಮ ಚರಿತ್ರೆಯಂತೆ ಇದೆ. ಬಾಲ್ಯ ಜೀವನದಿಂದ ಹಿಡಿದು ವೃತ್ತಿ ಜೀವನದವರೆಗೆ ಅಂದರೆ ಪ್ರಸ್ತುತದವರೆಗೆ ಎಳೆ ಎಳೆಯಾಗಿ ತಿಳಿ ಹೇಳುವ ಅತ್ಯುತ್ತಮ ಪುಸ್ತಕವಾಗಿದೆ. ಇವರಿಂದ ಇಂತಹ ಮತ್ತಷ್ಟು ಮೌಲಿಕ ಕೃತಿಗಳು ರಚನೆಯಾಗಿ ಸಾಹಿತ್ಯ ವಲಯದಲ್ಲಿ ವಿರಾಜಮಾನವಾಗಲಿ ಎಂಬ ಆಶಯ ನಮ್ಮದು.



– ಈಶ್ವರ ಕುರಿ (ಜಕ್ಕಲಿ).

## ಹಂದಿ ಜೋಗೇರ, ಮೋಡಿಕಾರ ಜನಾಂಗಕ್ಕೆ ರಕ್ಷಣೆ ನೀಡಲು ಮನವಿ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಪಟ್ಟಣದ ಅಮಾಯಕ ಹಂದಿ ಜೋಗೇರ ಮತ್ತು ಕೆಲವು ಮೋಡಿಕಾರ ಜನಾಂಗದ ಮೇಲೆ ಅನಾವಶ್ಯಕವಾಗಿ ಕೇಸ್ ದಾಖಲು ಮಾಡದೇ ಜನಾಂಗಕ್ಕೆ ರಕ್ಷಣೆ ನೀಡಬೇಕೆಂದು ಕರ್ನಾಟಕ ಮಾದಿಗ ದಂಡೋರ(ಮಾದಿಗ ಮೀಸಲಾತಿ ಹೋರಾಟ ಸಮಿತಿ) ಶಿರಹಟ್ಟಿ ಇವರ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಶಿರಹಟ್ಟಿ ಪಟ್ಟಣದಲ್ಲಿ ಕಳೆದ 40 ವರ್ಷಗಳಿಂದ ವಾಸ ಮಾಡುತ್ತಾ ಬಂದಿರುವ ಇವರು, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳಷ್ಟು ಕಷ್ಟದಲ್ಲಿದ್ದು ಹಂದಿ ವ್ಯಾಪಾರ, ಕೂದಲು ವ್ಯಾಪಾರ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ.

ಇಂತಹ ಅಮಾಯಕರಿಗೆ ನ್ಯಾಯ ದೊರಕಿಸಿ, ಪೊಲೀಸ್ ರಕ್ಷಣೆ ಕೊಡಬೇಕೆಂದು ಮನವಿಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ರಾಮಚಂದ್ರ ಗಡದವರ, ಸಿದ್ದಪ್ಪ ಹಂದಿಜೋಗಿ, ಮಲ್ಲಪ್ಪ ಮೋಡಿಕಾರ, ಬೆಳ್ಳಮ್ಮ ಮೋಡಿಕಾರ, ನೀಲಪ್ಪ ಮೋಡಿಕಾರ, ಬಸಪ್ಪ ಹಂದಿ ಜೋಗೇರ, ದುರಗಮ್ಮ ಮೋಡಿಕಾರ, ಶೇಖಪ್ಪ ಮೋಡಿಕಾರ ಉಪಸ್ಥಿತರಿದ್ದರು.

## ಡಿಸೆಂಬರ್ 9ರಂದು ರಾಷ್ಟ್ರೀಯ ಲೋಕ ಅದಾಲತ್

■ವಿಜಯಸಾಕ್ಷಿ ಸುದ್ದಿ, ಗದಗ

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಆದೇಶದನ್ವಯ ಗದಗ ಜಿಲ್ಲೆಯಲ್ಲಿ ಡಿಸೆಂಬರ್ 9ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು, ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದ್ದು, ರಾಜೀ ಸಂಧಾನದಲ್ಲಿ ಪಾಲ್ಗೊಂಡು ತಮಗಾಗುವ ಆರ್ಥಿಕ ಹೊರೆ ಹಾಗೂ ಸಮಯ ಪೋಲಾಗುವುದನ್ನು ತಪ್ಪಿಸಲು, ಮೊದಲಿನ ಬಾಂಧವ್ಯ ಉಳಿಸಿಕೊಳ್ಳಲು ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಬಸವರಾಜ ತಿಳಿಸಿದ್ದಾರೆ.

ಗದಗ ಜಿಲ್ಲೆಯಲ್ಲಿ ರಾಜೀ ಸಂಧಾನಕ್ಕಾಗಿ ಸಿವಿಲ್ ದಾವೆಗಳು, ಭೂಸ್ವಾಧೀನ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ದರಖಾಸ್ತು ಅರ್ಜಿಗಳು, ಕಾರ್ಮಿಕ ಪ್ರಕರಣಗಳು, ಎಮ್‌ಎಮ್‌ಆರ್‌ಡಿ ಪ್ರಕರಣಗಳು, ಚೆಕ್‌ಬೌನ್ಸ್ ಪ್ರಕರಣಗಳು, ವಾಹನ ಅಪಘಾತ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜೀ ಆಗಲು ಅರ್ಹವಿರುವ ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು ಸೇರಿದಂತೆ ಹಲವಾರು ಪ್ರಕರಣಗಳನ್ನು ರಾಜೀಗಾಗಿ ಗುರುತಿಸಲಾಗಿದ್ದು, ಪ್ರತಿದಿನ ರಾಜೀಗಾಗಿ ಆಯ್ಕೆ ಮಾಡಿದ ಪ್ರಕರಣಗಳನ್ನು ಸಂಬಂಧಪಟ್ಟ ವಕೀಲರು ಹಾಗೂ ಪಕ್ಷಗಾರರೊಂದಿಗೆ ಮುಂಚಿತವಾಗಿಯೇ ರಾಜೀ ಸಂಧಾನದಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿಸಿ ಅವರ ಮನ ಒಲಿಸಿ ರಾಜೀ ಸಂಧಾನ ಮಾಡಿಕೊಳ್ಳಲು ತಿಳಿಯಪಡಿಸಲಾಗುವುದು.

ಪ್ರಕರಣಗಳಿಗೆ ಸಂಬಂಧಪಟ್ಟ ವಕೀಲರು, ಕಕ್ಷಿದಾರರು ಹಾಗೂ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು, ಇಲಾಖೆಗಳವರು ಅಂದಿನ ಲೋಕ ಅದಾಲತ್‌ನಲ್ಲಿ ಪಾಲ್ಗೊಂಡು ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಗುರುಪ್ರಸಾದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಣೇನಹಳ್ಳಿಯಲ್ಲಿ ದೊರೆತ 900 ವರ್ಷಗಳ ಹಳೆಯ ಬಸದಿ

■ವಿಜಯಸಾಕ್ಷಿ ಸುದ್ದಿ, ಶ್ರವಣಬೆಳಗೊಳ

ಶ್ರೀಕ್ಷೇತ್ರ ಶ್ರವಣಬೆಳಗೊಳ ಸಮೀಪದ ಸಾಣೇನಹಳ್ಳಿಯ ಅರಣ್ಯದಲ್ಲಿ 900 ವರ್ಷಗಳಷ್ಟು ಹಳೆಯದಾದ ಜಿನಾಲಯ ಪತ್ತೆಯಾಗಿದೆ. ಶ್ರೀಕ್ಷೇತ್ರ ಶ್ರವಣಬೆಳಗೊಳದ ಭಟ್ಟಾರಕ ಶ್ರೀ ಅಭಿನವ ಚಾರುಕೀರ್ತಿ ಅವರು ಅ.10ರಂದು ಪುರಾತತ್ವ ಶಾಸ್ತ್ರಜ್ಞರೊಂದಿಗೆ ಈ ಸ್ಥಳವನ್ನು ಸ್ವಚ್ಛಗೊಳಿಸಿದರು.

ಕನ್ನಡ ಗೆಜೆಟಿಯರ್ ಪ್ರಕಾರ, ಅದರಲ್ಲಿ 22ನೇ ತೀರ್ಥಂಕರನಾದ ನೇಮಿನಾಥನ ಪ್ರತಿಮೆಯ ಬಗ್ಗೆ ಮಾಹಿತಿ ಕಂಡುಬಂದಿದೆ. ಪ್ರಸ್ತುತ ಅದರಲ್ಲಿ ಒಂದು ಶಾಸನವಿದ್ದು, ಅದರ ಕಾಲ ಇತ್ಯಾದಿ ಮಾಹಿತಿಯನ್ನು ಪಡೆಯಲಾಗಿದೆ. ಗಳತ್ಗಾದ ಶ್ರೀ ಪ್ರಶಾಂತ್ ಜೆ ಉಪಾಧ್ಯ ಅವರು ಕನ್ನಡ ಭಾಷೆಯಲ್ಲಿ ಅದರ ಪರಿಚಯವನ್ನು ಬರೆದಿದ್ದಾರೆ. ಕೆಲ ದಿನಗಳ ಹಿಂದೆ ಇದೇ ಸಾಣೇನಹಳ್ಳಿಯಲ್ಲಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ನೇತೃತ್ವದಲ್ಲಿ ಸ್ವಚ್ಛತಾ ಕಾರ್ಯ ನಡೆದಿತ್ತು.





**ಪತ್ರಿಕಾಗೋಷ್ಠಿಯಲ್ಲಿ ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಅಶೋಕ ಶಿದ್ಲಿಂಗ್ ಮಾಹಿತಿ**

## ಶ್ರೀ ಅಂಬಾಭವಾನಿ ದೇವಿಗೆ ಸ್ವರ್ಣ ಕಿರೀಟ ಧಾರಣೆ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಶ್ರೀ ಅಂಬಾಭವಾನಿ ದೇವಿಗೆ 3.26 ಗ್ರಾಂ ಬಂಗಾರದ ಕಿರೀಟ ಧಾರಣೆ ಕಾರ್ಯಕ್ರಮವನ್ನು ಅ.15ರಂದು ಬೆಳಿಗ್ಗೆ ವಿವಿಧ ಪೂಜಾ ಕೈಂಕರ್ಯಗಳ ಮೂಲಕ ನೆರವೇರಿಸಲಾಗುವುದು ಎಂದು ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಅಶೋಕ ಶಿದ್ಲಿಂಗ್ ಹೇಳಿದರು.

ಕಾರ್ಯಕ್ರಮದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಅ.15ರಂದು ಸಂಜೆ ಶ್ರೀ ಚನ್ನವೀರಯ್ಯಸ್ವಾಮೀಜಿ, ಸಂತೋಷ ಹಿರೇಮಠ, ನಾಗಭೂಷಣ ಹಿರೇಮಠ ಇವರಿಂದ ದೇವಿ ಪುರಾಣ ಅ.24ವರೆಗೆ ನಡೆಯಲಿದೆ. ಅಂದು, ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜ ಪಂಚ ಟ್ರಸ್ಟ್, ತರುಣ ಮಿತ್ರ ಮಂಡಳಿ, ಮಹಿಳಾ ಮಂಡಳಿ ಹಾಗೂ ಸರ್ವ ಭಕ್ತರ ಆಶ್ರಯದಲ್ಲಿ ಬಂಗಾರದ ಕಿರೀಟ ಧಾರಣೆ ಮತ್ತು ದಸರಾ ಉತ್ಸವದ ಘಟಸ್ಥಾಪನೆ ಜರುಗುವುದು.

ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ ಹಾಗೂ ಹುಬ್ಬಳ್ಳಿಯ ಶ್ರೀ ಪ್ರಣವಾನಂದತೀರ್ಥ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವರು. ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಅಶೋಕ ಶಿದ್ಲಿಂಗ್ ಅಧ್ಯಕ್ಷತೆ ವಹಿಸುವರು. ದಸರಾ ಮಹೋತ್ಸವದ ಅಂಗವಾಗಿ ಪ್ರತಿನಿತ್ಯ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ.

ಕಾರ್ಯದರ್ಶಿ ದೇವೇಂದ್ರಸಾ ಮಗಜಿ ಉಪಸ್ಥಿತಿಯಲ್ಲಿ ಶಾಸಕ ಡಾ.ಚಂದ್ರು ಲಮಾಣಿ, ಮಂಜುನಾಥ ಕಬಾಡಿ, ಹನುಮಂತಸಾ ನಿರಂಜನ, ಲೋಕನಾಥ ಕಬಾಡಿ, ಶಂಕರಸಾ ಪವಾರ, ಶ್ರೀಕಾಂತ ಖಟವಟೆ, ಫಕ್ಕಿರಸಾ ಬಾಂಡಗೆ, ರಾಮಚಂದ್ರಸಾ ಹಬೀಬ, ಪರುಶುರಾಮ ಬದಿ, ಕೆ.ವ್ಹಿ ಹಂಚಿನಾಳ, ನಾರಾಯಣಪ್ಪ ಇಲ್ಲೂರ, ವಿ.ಎಸ್ ನಾಡಗೌಡ್ರ, ಎ.ಕೆ ಬೆಲ್ಲದ, ವಿಣಾದೇವಿ ಸೋನಿ ಅತಿಥಿಗಳಾಗಿ ಪಾಲ್ಗೊಳ್ಳುವರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಡಾ.ಪದ್ಮಾವತಿ ಸಂಜೀವಕುಮಾರ, ಬಸವರಾಜ ಕಲ್ಲಕುಟಗರ, ಅನಿಲಕುಮಾರ ಅಂಗಡಿ, ಪ್ರಗತಿ ಮಗಜಿ, ಪೂಜಾ ಖೋಡೆ ಅವರನ್ನು ಸನ್ಮಾನಿಸಲಾಗುವದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಾಲಚಂದ್ರ ಹಾದಿಮನಿ, ದೇವೇಂದ್ರಸಾ ಮಗಜಿ, ಸ್ವಾಮಿಸಾ ಪವಾರ, ದೇವೇಂದ್ರಸಾ ಮಗಜಿ, ಗಣೇಶ ಮಗಜಿ, ವಿಜಯ ಬಸವಾ, ರಾಘವೇಂದ್ರ ಹಾದಿಮನಿ, ರಾಘೂ ಬಾಕಳೆ, ಸೋಮನಾಥಸಾ ಸಿದ್ಲಿಂಗ್, ರವಿ ಸಿದ್ಲಿಂಗ್, ಶಂಕರಸಾ ಬಾಕಳೆ, ಬಾಲಚಂದ್ರಸಾ ಬಾಲು, ಅಪ್ಪು ಖಟವಟ್ಟೆ, ರಾಘು ಬದಿ, ರಾಧಕೃಷ್ಣ ಮೆಹರವಾಡೆ, ವೆಂಕಟೇಶ ಬಾಕಳೆ, ಕಿರಣ ಕಬಾಡಿ ಇದ್ದರು.

## 'ಛಲವಾದಿ ಸ್ವಾಭಿಮಾನಿ ಸಮಾವೇಶ'ದ ವಿವಿಧ ಕಮಿಟಿಗಳ ರಚನೆ



■ವಿಜಯಸಾಕ್ಷಿ ಸುದ್ದಿ, ಗದಗ

'ಛಲವಾದಿ ಸ್ವಾಭಿಮಾನಿ ಸಮಾವೇಶ'ದ ವಿವಿಧ ಕಮಿಟಿಗಳ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಅತಿಥಿಗಳ ಆಮಂತ್ರಣ ಸಮಿತಿಯ ಅಧ್ಯಕ್ಷರಾಗಿ ಲೋಹಿತ್, ಗೌರವಾಧ್ಯಕ್ಷ-ಪ್ರಕಾಶ ಕೆಲೂರು, ಪ್ರಚಾರ ಸಮಿತಿ-ಮಹಾಂತೇಶ ಮದ್ನೂರ, ಮಂಜುನಾಥ ಚಲವಾದಿ, ಊಟ ಮತ್ತು ವಸತಿ ಸಮಿತಿ-ಹೇಮಂತ ಕಾಳೆ, ಮಂಜುನಾಥ ಪೂಜಾರ, ಸಾಂಸ್ಕೃತಿಕ ಕಾರ್ಯಕ್ರಮ-ಬಸವರಾಜ ಈರಣ್ಣವರ, ಸಂತೋಷ ಬಣಕಾರ, ಸನ್ಮಾನ ಸಮಿತಿ- ರಮೇಶ ಬಾಳಮ್ಮವರ, ಬಸವರಾಜ ಸತ್ಯಮ್ಮನವರ, ಸ್ಟೇಜ್ ಅತಿಥಿಗಳ ಆಹ್ವಾನ ಸಮಿ-ಶೈಯ್ಯದ ಹುಣಸಿಮರದ, ಬಸವರಾಜ ಹಗೇದಾಳರನ್ನು ಆಯ್ಕೆ ಮಾಡಲಾಯಿತು.

ಕರ್ನಾಟಕ ರಾಜ್ಯ ಚಲವಾದಿ ಮಹಾಸಭಾದ ಗದಗ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿ, ಕಾರ್ಯಾಧ್ಯಕ್ಷ-ರವಿ ಕರಬಸಣ್ಣವರ, ಖಜಾಂಚಿ-ಚಂದ್ರಶೇಖರ ಕಾಳೆ, ಉಪ ಖಜಾಂಚಿ-ದೇವೆಂದ್ರಪ್ಪ ಬಣಕಾರ, ಜಿಲ್ಲಾ ಉಪಾಧ್ಯಕ್ಷ-ಡಿ.ಪ್ರಸಾದ ಲೋಹಿತ್ ಬಿಳೆಯಲಿ, ಉಮೇಶ ಚಲವಾದಿ, ಗೌರವಾಧ್ಯಕ್ಷ-ಎಫ್. ವೈ ದೊಡ್ಡಮನಿ, ಸಂಘಟನಾ ಕಾರ್ಯದರ್ಶಿ-ರಾಮಕೃಷ್ಣ ಬೇವಿನಕಟ್ಟಿ ಆಯ್ಕೆಯಾದರು.

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಗದಗ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ವಿಜಯ ಚಲವಾದಿ (ನರಗುಂದ) ಕಾರ್ಯದಶಿಗಳಾಗಿ ಮಾಂತೇಶ ಬಾಳಮ್ಮನವರ ಸಂಘಟನಾ ಕಾರ್ಯದರ್ಶಿಗಳಾಗಿ ಜೀವನ್ ದಿಂಡೇನವರ ಉಪಾಧ್ಯಕ್ಷರಾಗಿ ಪುನೀತ್ ತಮ್ಮಣ್ಣವರ ಖಜಾಂಚಿಗಳಾಗಿ ಅನೀಲ್ ಕುರ್ತಕೋಟಿ ಆಯ್ಕೆ ಮಾಡಲಾಯಿತು.

ಗದಗ ಶಹರ ಅಧ್ಯಕ್ಷ-ಹೇಮಂತ ಕಾಳೆ, ಉಪಾಧ್ಯಕ್ಷ-ಸಂತೋಷ ಕಲ್ಯಾಣಿ, ಗದಗ ತಾಲೂಕಾಧ್ಯಕ್ಷರಾಗಿ-ರಮೇಶ ಕಡಿ, ಉಪಾಧ್ಯಕ್ಷ-ಚಂದ್ರು ಕಾಡಮ್ಮನವರ, ಮುಂಡರಗಿ ತಾಲೂಕಾಧ್ಯಕ್ಷ-ದೇವಪ್ಪ ಎಲಿಬಳ್ಳಿ, ರೋಣ ತಾಲೂಕಾಧ್ಯಕ್ಷ-ಅಶೋಕ ತಾಳದವರ, ಯುವ ಬ್ರೀಗೇಡ್ ಅಧ್ಯಕ್ಷ- ಮಾಂತೇಶ್ ಮದ್ನೂರ, ಕಾರ್ಯದರ್ಶಿ-ಶೈಯ್ಯದ ಹುಣಶಿಮರದ, ಉಪಾಧ್ಯಕ್ಷ-ಯಮನೂರ ಸಿಂಗಾಡಿ ಇವರನ್ನು ಆಯ್ಕೆ ಮಾಡಲಾಯಿತು.

ಕಾನೂನು ಸಲಹೆಗಾರರ ಸಮಿತಿ ಅಧ್ಯಕ್ಷರಾಗಿ ಕಿಶೋರಕುಮಾರ, ಗೌರವಾಧ್ಯಕ್ಷ-ಎಫ್.ವಾಯ್ ದೊಡ್ಡಮನಿ, ಕಾರ್ಯದರ್ಶಿ-ಅಶೋಕ ಸತ್ಯಮ್ಮನವರ, ರಾಜ್ಯ ಸಮಿತಿಯ ಸದಸ್ಯರಾಗಿ ಸಿದ್ದಪ್ಪ ಲಿಂಗದಾಳ, ಸತೀಶ್ ಹುಲಿ, ಪ್ರಕಾಶ ಕೆಲೂರು, ಬಸವರಾಜ ಕರಬಸಣ್ಣವರ, ನಾಗರಾಜ ಅಡವಿ, ರಮೇಶ ಬಾಳಮ್ಮನವರ ಇವರನ್ನು ಮುಂದುವರೆಸಲಾಯಿತು ಎಂದು ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ರವಿ ಕರಬಸಣ್ಣವರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉದ್ದಿಮೆ ಪರವಾನಿಗೆ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಪೌರಸಭೆಗಳ ಅಧಿನಿಯಮದಡಿಯಲ್ಲಿ 13ನೇ ಅನುಸೂಚಿಯಲ್ಲಿ ಸೂಚಿಸುವಂತಹ ಯಾವುದೇ ಅಂಗಡಿ ವ್ಯಾಪಾರ, ಉದ್ದಿಮೆ ಹಾಗೂ ಇತರೆ ವಹಿವಾಟು ನಡೆಸುತ್ತಿದ್ದಲ್ಲಿ ನಗರಸಭೆಯಿಂದ ಪ್ರಸ್ತುತ ಪರವಾನಗಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈಗಾಗಲೇ ಲೈಸನ್ಸ್ ಪಡೆದವರ 2022-23ನೇ ಸಾಲಿನ ಚಾಲ್ತಿ ಅವಧಿ ಮುಗಿದಿರುತ್ತದೆ. ವ್ಯಾಪಾರಸ್ಥರು ತಮ್ಮ ಲೈಸನ್ಸ್‌ಗಳನ್ನು ಇನ್ನೂವರೆಗೂ ನವೀಕರಿಸಿಕೊಂಡಿರುವುದಿಲ್ಲ. 2023-24ನೇ ಚಾಲ್ತಿ ಸಾಲಿನ ವರ್ಷವು ಅವಧಿಯು 2024ರ ಮಾರ್ಚ್ 31 ಕ್ಕೆ ಮುಗಿಯಲಿದ್ದು, ಲೈಸನ್ಸ್‌ಗಳನ್ನು ನವೀಕರಿಸಿಕೊಳ್ಳಬೇಕು.

ಅನಧಿಕೃತವಾಗಿ ವ್ಯಾಪಾರ ಹಾಗೂ ಉದ್ದಿಮೆ ಮತ್ತು ಇತರೆ ವಹಿವಾಟು ಮಾಡುವ ವ್ಯಾಪಾರಸ್ಥರು ಲೈಸನ್ಸ್ ಪಡೆಯದೇ ಇದ್ದವರು ಸೂಕ್ತ ದಾಖಲೆಗಳಾದ ಆಧಾರ್ ಕಾರ್ಡ್, ಭಾಡಿಗೆ ಕರಾರು ಪತ್ರ, ಝರಾಕ್ಸ್ ಪ್ರತಿಗಳು ಹಾಗೂ ಪಾಸ್ ಪೋರ್ಟ ಸೈಜ್ 1 ಫೋಟೋ, ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ 2024ರ ಮಾರ್ಚ್ 31 ರೊಳಗಾಗಿ ವ್ಯಾಪಾರ ವಹಿವಾಟು ಮಾಡಲು ಆನ್‌ಲೈನ್ ತಂತ್ರಾಂಶದ ಮೂಲಕ ಸೃಜಿಸಿದ ಡಿಜಿಟಲ್ ಸಹಿಯುಳ್ಳ ಉದ್ದಿಮೆ ಪರವಾನಿಗೆ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಂಡು ವ್ಯಾಪಾರವನ್ನು ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಕರ್ನಾಟಕ ಪೌರಸಭಾ ಅಧಿನಿಯಮದನ್ವಯ ದಂಡ ವಿಧಿಸುವುದಲ್ಲದೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಲಾಗುವುದು.

ಇಂತಹ ಅಹಿತಕರ ಘಟನೆಗಳಿಗೆ ಅವಕಾಶ ಕಲ್ಪಿಸದೆ ಸಮಸ್ತ ಅಂಗಡಿ, ವ್ಯಾಪಾರ, ಉದ್ದಿಮೆ ಹಾಗೂ ಇತರೆ ಪರವಾನಿಗೆಯನ್ನು 2023-24ನೇ ಸಾಲಿನವರೆಗೆ ನವೀಕರಿಸಿಕೊಳ್ಳಬೇಕು. ಅನಧಿಕೃತವಾಗಿ ವ್ಯಾಪಾರ ಹಾಗೂ ಉದ್ದಿಮೆ ಮತ್ತು ಇತರೆ ವಹಿವಾಟು ಮಾಡುವ ವ್ಯಾಪಾರಸ್ಥರು ಲೈಸನ್ಸ್ ಪಡೆದು ವ್ಯಾಪಾರ ಮಾಡಿಕೊಳ್ಳಬೇಕು ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಾರಾಷ್ಟ್ರ ಸರಕಾರದಿಂದ ಕರ್ನಾಟಕ ಸರಕಾರದ ಆಡಳಿತದಲ್ಲಿ ಅನಗತ್ಯ ಹಸ್ತಕ್ಷೇಪ

# ಮಹಾರಾಷ್ಟ್ರ ಸರಕಾರಕ್ಕೆ ತಕ್ಕ ಪ್ರತಿಕ್ರಿಯೆ ನೀಡಿ

■ವಿಜಯಸಾಕ್ಷಿ ಸುದ್ದಿ, ನರಗುಂದ

ರಾಜ್ಯದ ಗಡಿ ಹಳ್ಳಿಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಮಾಡದ ಕಾರಣ ಅಲ್ಲಿನ ಕನ್ನಡಿಗರು ಆಹಾರ, ವಸತಿ, ಉದ್ಯೋಗ, ಮುಂತಾದ ಸೌಲಭ್ಯಗಳಿಂದ ವಂಚಿತರಾಗಿ ಆರ್ಥಿಕವಾಗಿ ಹಿಂದುಳಿದಿದ್ದಾರಲ್ಲದೇ ಮಹಾರಾಷ್ಟ್ರ ಸರಕಾರವು ನೀಡುವ ಆರೋಗ್ಯ ವಿಮೆಯಂತಹ ಯೋಜನೆಗಳಿಗೆ ಜೋತು ಬಿದ್ದಿದ್ದಾರೆ. ಮಹಾರಾಷ್ಟ್ರ ಸರಕಾರವು ಕರ್ನಾಟಕ ಸರಕಾರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಮಹಾಸ್ವಾಮಿಗಳು ಹೇಳಿದರು.



ತಾಲೂಕಿನ ಬೈರನಹಟ್ಟಿ ಗ್ರಾಮದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ದೊರೆಸ್ವಾಮಿ ವಿರಕ್ತಮಠದ ಪೂಜ್ಯರು ಮಹಾರಾಷ್ಟ್ರ ಸರಕಾರದ ವಿವಾದಾತ್ಮಕ ಆರೋಗ್ಯ ವಿಮೆಯನ್ನು ಖಂಡಿಸಿ ಶ್ರೀಶೈಲ ತಳವಾರ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು.

ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದದ ನಡುವೆಯೂ ಕರ್ನಾಟಕ ಗಡಿ ಭಾಗದ 8 ಹಳ್ಳಿಗಳ ಜನರಿಗೆ ಆರೋಗ್ಯ ವಿಮೆಯನ್ನು ನೀಡುವುದರ ಮೂಲಕ ಕರ್ನಾಟಕದ ಆಡಳಿತದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿದೆ. ಮಹಾರಾಷ್ಟ್ರ ಸರಕಾರದ ಈ ನಡೆ ಖಂಡನೀಯವಾಗಿದೆ ಎಂದರು.

ಆರೋಗ್ಯ ವಿಮೆಯನ್ನು ಪಡೆಯಲು ಎಮ್‌ಇಎಸ್ ಕಚೇರಿಯಿಂದ ಪತ್ರ ಹಾಗೂ ಮರಾಠಿ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿ ಆರೋಗ್ಯ ವಿಮೆಯನ್ನು ನೀಡಿ, ಕರ್ನಾಟಕ ಹಿತಾಸಕ್ತಿಗೆ ಮಾರಕ ಯೋಜನೆಯನ್ನು ಜಾರಿಗೆ ತರುತ್ತಿದೆ. ಮುಖ್ಯಮಂತ್ರಿಗಳು ಈ ಕುರಿತು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಪದೇ ಪದೇ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುತ್ತಿರುವ ಮಹಾರಾಷ್ಟ್ರ ಸರಕಾರಕ್ಕೆ ತಕ್ಕ ಪ್ರತಿಕ್ರಿಯೆ ನೀಡಬೇಕೆಂದು ಹೇಳಿದರು. ಕರ್ನಾಟಕ ಗಡಿ ಉಸ್ತುವಾರಿ ಸಚಿವರನ್ನು ನೇಮಕ ಮಾಡಿ ಅವರಿಗೆ ಪೂರ್ಣ ಅಧಿಕಾರವನ್ನು ನೀಡುವುದು, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರಿ ಸಮಿತಿಯನ್ನು ರಚಿಸುವ ಮೂಲಕ ಗಡಿ ಅಭಿವೃದ್ಧಿ ಪ್ರಾಧಿಕಾರ, ಸಂರಕ್ಷಣಾ ಆಯೋಗವನ್ನು ಬಲಪಡಿಸಬೇಕು. ಗಡಿ ಪ್ರಕರಣನ್ನು ಬಗೆಹರಿಸಲು ತಜ್ಞರ ಸಮಿತಿಯನ್ನು ರಚಿಸಬೇಕೆಂದು ಕರ್ನಾಟಕ ಸರಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಚನ್ನಬಸಪ್ಪ ಕಂಠಿ, ಚನ್ನು ನಂದಿ, ಡಾ. ಸಿ.ಕೆ ರಾಚನಗೌಡ್ರ, ಮುತ್ತು ತೊರಗಲ್ಲ, ಡಾ.ಮುತ್ತು ಸುರಕೋಡ, ಆರ್.ಬಿ ಚಿನಿವಾಲರ, ಮಹಾಂತೇಶ ಹಿರೇಮಠ, ಮಂಜುನಾಥ ದೊಡಮನಿ, ಸುರೇಶ ಮಾದರ, ಬಿ.ವ್ಹಿ ಹೆಬ್ಬಳ್ಳಿ, ಎಸ್.ಎನ್ ಬನಹಟ್ಟಿ ಮುಂತಾದವರಿದ್ದರು.

> ಮರಾಠಿ ವಿಮೆಯನ್ನು ಬಳಸಿ, ಕರ್ನಾಟಕ ವಿರುದ್ಧ ಕುತಂತ್ರ ಬುದ್ಧಿಯನ್ನು ಉಪಯೋಗಿಸುತ್ತಿರುವ ಮಹಾರಾಷ್ಟ್ರ ಸರಕಾರ ಗಡಿ ಭಾಗದಲ್ಲಿ ಸುಖಾಸುಮ್ಮನೆ ಅಶಾಂತಿಯನ್ನು ಮೂಡಿಸುತ್ತಿದೆ. ಹೀಗಾಗಿ ಕರ್ನಾಟಕ ಸರಕಾರ ಮಹಾರಾಷ್ಟ್ರದ ಯಾವುದೇ ಯೋಜನೆಗಳಿಗೆ ಅವಕಾಶವನ್ನು ನೀಡಬಾರದೆಂದು ಶ್ರೀಗಳು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

# ಆನಿವಾಸಿ ಭಾರತೀಯ ಕನ್ನಡಿಗರೊಂದಿಗೆ ಯಶಸ್ವಿ ಮಾತುಕತೆ

▸▸ಮೊದಲನೇ ಪುಟದಿಂದ

**ಪ್ರಮುಖ ಅಂಶಗಳು**

* ಸ್ಮಾರಕ ದತ್ತು ಯಶಸ್ಸಿಗೆ ಎನ್.ಆರ್.ಐ ಗಳೊಂದಿಗೆ ಸಚಿವ ಎಚ್.ಕೆ.ಪಿ. ಅಂತಾರಾಷ್ಟ್ರೀಯ ಮಟ್ಟದ ಸಭೆ
* ಪ್ರವಾಸಿ ಕೇಂದ್ರಗಳಲ್ಲಿ ಮೂಲಸೌಕರ್ಯ ಹೆಚ್ಚಿಸುವತ್ತ ಸರ್ಕಾರದ ಚಿತ್ತ
* ಆನಿವಾಸಿ ಭಾರತೀಯ ಕನ್ನಡಿಗರಿಗೆ ಸ್ಮಾರಕ ದತ್ತು ಯೋಜನೆಯಲ್ಲಿ ಪಾಲ್ಗೊಳ್ಳಲು ಕರೆ
* ಎನ್.ಆರ್.ಐ ಗಳಿಂದ ಯೋಜನೆಗೆ ಪೂರಕ ಬೆಂಬಲ

ವಿವರಿಸಿದರಲ್ಲದೆ, ಈ ಯೋಜನೆ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಿದರು.

ರಾಜ್ಯದ ಪ್ರವಾಸಿ ಕೇಂದ್ರಗಳನ್ನು ಇನ್ನಷ್ಟು ಆಕರ್ಷಕಗೊಳಿಸಲು ಮತ್ತು ಪ್ರವಾಸಿಗರಿಗೆ ಆಹ್ಲಾದಕರ ಅನುಭವ ಸಿಗುವಂತೆ ಮಾಡಲು ಮೂಲ ಸೌಕರ್ಯಗಳನ್ನು ಒದಗಿಸುವತ್ತ ರಾಜ್ಯ ಸರ್ಕಾರ ಚಿತ್ತಹರಿಸಿದೆ ಎಂದು ತಿಳಿಸಿದ ಸಚಿವರು, ರಾಜ್ಯದ ಬಗ್ಗೆ ಪ್ರೀತಿ, ಅಭಿಮಾನ ಉಳ್ಳಂತಹವರು ಈ ಕಾರ್ಯಕ್ಕೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಇತ್ತೀಚೆಗೆ ರಾಜ್ಯದ ಇನ್ನೂ ಮೂರು ಪ್ರವಾಸಿ ತಾಣಗಳನ್ನು ಯುನೆಸ್ಕೋ ವಿಶ್ವ ಪಾರಂಪರಿಕ ತಾಣ ಎಂದು ಗುರ್ತಿಸಿ ಪ್ರಕಟಿಸಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಅವರು, ಬೇಲೂರು, ಹಳೆಬೀಡು ಮತ್ತು ಸೋಮನಾಥಪುರ ದೇಗುಲಕ್ಕೆ ಪ್ರವಾಸಿಗರ ಅದರಲ್ಲೂ ಜಾಗತಿಕ ಪ್ರವಾಸಿಗರ ಹರಿವು ಹೆಚ್ಚಲಿದೆ. ಈ ಹಿನ್ನೆಲೆಯಲ್ಲಿ ಸ್ಮಾರಕ ದತ್ತು ಯೋಜನೆಗೆ ಯಶಸ್ಸು ದೊರಕಲಿದೆ ಎಂದು ಆನಿವಾಸಿ ಭಾರತೀಯರಿಗೆ ಅದರಲ್ಲೂ ಅಮೇರಿಕದಲ್ಲಿ ನೆಲೆಸಿರುವ ಕನ್ನಡಿಗರಿಗೆ ಭರವಸೆ ನೀಡಿದರು.

ಸಭೆಯಲ್ಲಿ ವಿದೇಶಗಳಿಂದ ಪಾಲ್ಗೊಂಡಿದ್ದ ಉದ್ಯಮಪತಿಗಳು ರಾಜ್ಯದ ಸ್ಮಾರಕ ದತ್ತು ಯೋಜನೆ ಬಗ್ಗೆ ಹರ್ಷ ವ್ಯಕ್ತಪಡಿಸಿದರಲ್ಲದೆ, ತಮ್ಮ ಸಹಕಾರದ ಜತೆಗೆ ತಾವು ಪ್ರತಿನಿಧಿಸುತ್ತಿರುವ ಇತರೆ ಖಾಸಗಿ ಸಂಸ್ಥೆಗಳು ಮತ್ತು ಪ್ರವಾಸೋದ್ಯಮ ಕ್ಷೇತ್ರದ ಮುಂಚೂಣಿ ಸಂಸ್ಥೆಗಳೊಂದಿಗೆ ಚರ್ಚೆ ನಡೆಸುವ ಮೂಲಕ ಯೋಜನೆ ಯಶಸ್ಸಿಗೆ ಸಾಥ್ ನೀಡುವುದಾಗಿ ಪ್ರಕಟಿಸಿದರು.

ಸಭೆಯಲ್ಲಿ ಅಕ್ಸೆಲ್ ವೆಂಚರ್ ಸಂಸ್ಥೆಯ ಪಾಲುದಾರ ಮತ್ತು ಕಲ್ಕಿ ಫೌಂಡೇಶನ್ ಅಧ್ಯಕ್ಷರಾಗಿರುವ ಪ್ರಶಾಂತ್ ಪ್ರಕಾಶ್, ಅಮೇರಿಕಾದ ವಿವಿಧ ರಾಯಭಾರಿಗಳು ಮತ್ತು ರಾಜ್ಯದ ಪರವಾಗಿ ಪ್ರವಾಸೋದ್ಯಮ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಪುರಾತತ್ವ ಇಲಾಖೆ ಆಯುಕ್ತರಾದ ದೇವರಾಜ್ ಸೇರಿದಂತೆ ಅಧಿಕಾರಿಗಳ ತಂಡ ಹಾಜರಿತ್ತು.

# ಗಾಂಜಾ ಬೆಳೆಸಿದ ಆರೋಪಿಗೆ ಶಿಕ್ಷೆ ಪ್ರಕಟ

■ವಿಜಯಸಾಕ್ಷಿ ಸುದ್ದಿ, ಗದಗ

ಮೆಣಸಿನಕಾಯಿ ಬೆಳೆಯ ನಡುವೆ ಅಕ್ರಮವಾಗಿ ಗಾಂಜಾ ಬೆಳೆಸಿದ ಅಪರಾಧಕ್ಕೆ ಸಂಬಂಧಿಸಿ ನ್ಯಾಯಾಲಯವು ಆರೋಪಿಗೆ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ.

ನರೇಗಲ್ಲ ಪೊಲೀಸ್ ಠಾಣೆ ವ್ಯಾಪ್ತಿಯ ನಾಗರಾಳ ಗ್ರಾಮದಲ್ಲಿ ಅಬ್ಬಿಗೇರಿ ನಾಗರಾಳ ರಸ್ತೆಯ ಪಕ್ಕದಲ್ಲಿರುವ ಸರ್ವೆ ನಂ.18ರಲ್ಲಿ ದಿ.9.111.2018ರಂದು 1.30 ಗಂಟೆಯ ಸಮಯದಲ್ಲಿ ಆರೋಪಿ ವಿರೂಪಾಕ್ಷಪ್ಪ ಮಹಾದೇವಪ್ಪ ಕಮತರ ಈತ ತನ್ನ ಜಮೀನಿನಲ್ಲಿ ಹಸಿ ಮೆಣಸಿನಕಾಯಿ ಬೆಳೆಯ ನಡುವೆ 20 ಕೆಜಿಯಷ್ಟು ಹಸಿ ಗಾಂಜಾ ಗಿಡಗಳನ್ನು ಯಾವುದೇ ಪರವಾನಿಗೆ ಇಲ್ಲದೆ, ತನ್ನ ಸ್ವಂತ ಲಾಭದ ಉದ್ದೇಶದಿಂದ ಬೆಳೆಸಿದ್ದು, ಸದರಿ ಅಪರಾಧದ ಕುರಿತು ಆರೋಪಿತನ ವಿರುದ್ಧ ರೋಣ ವೃತ್ತ ಆರಕ್ಷಕ ನಿರೀಕ್ಷಕ ಎಂ.ಐ ನಡುವಿನಮನಿ ತನಿಖೆಯನ್ನು ಪೂರೈಸಿ, ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸಾಕ್ಷಿ ವಿಚಾರಣೆ ನಡೆಸಿದ ಗದುಗಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಾಜೇಶ್ವರ ಎಸ್.ಶೆಟ್ಟಿ ಇವರು ಪ್ರಕರಣದಲ್ಲಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ ಅ.11ರಂದು ಕಲಂ 20(ಎ), 8(ಬಿ) ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ 3 ವರ್ಷ ಕಠಿಣ ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸದರಿ ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕ ಮಲ್ಲಿಕಾರ್ಜುನಗೌಡ ಬಸವನಗೌಡ ದೊಡ್ಡಗೌಡ್ರ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

# ಶ್ರೀ ಕಾಳಿಕಾ ದೇವಸ್ಥಾನದಲ್ಲಿ ಶರನ್ನವರಾತ್ರಿ ಉತ್ಸವ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಕಾಳಿಕಾದೇವಿ ದೇವಸ್ಥಾನದಲ್ಲಿ ಅ.15ರಿಂದ ಅ.24ರವರೆಗೆ 51ನೇ ವರ್ಷದ ಶರನ್ನವರಾತ್ರಿ ಉತ್ಸವ ಜರುಗಲಿದೆ. ಅ.15ರಂದು ಪ್ರಾತಃಕಾಲ ಶ್ರೀವಿಶ್ವಕರ್ಮ ಧ್ವಜಾರೋಹಣದ ಮೂಲಕ ಉತ್ಸವವು ಅಧಿಕೃತವಾಗಿ ಪ್ರಾರಂಭಗೊಳ್ಳುವುದು. ನಂತರ ಘಟ ಸ್ಥಾಪನೆ ಜರುಗುವುದು. ಅ.15ರಿಂದ ಪ್ರತಿನಿತ್ಯ ಬೆಳಗ್ಗೆ 6 ಗಂಟೆಗೆ ಶ್ರೀದೇವಿಗೆ ಪಂಚಾಮೃತ ಅಭೀಷೇಕ, ಮಹಾಮಂಗಳಾರುತಿ ಜರುಗುವುದು.



ಅ.15ರ ಸಂಜೆ 7 ಗಂಟೆಗೆ ಶ್ರೀದೇವಿ ಚರಿತಾಮೃತ ಪ್ರಾರಂಭಗೊಳ್ಳಲಿದೆ. ಮುರನಾಳ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಜಗನ್ನಾಥ ಸ್ವಾಮೀಜಿ, ಹೊಳೆಆಲೂರ ಯಚ್ಚರಸ್ವಾಮಿ ಮಠದ ಯಚ್ಚರೇಶ್ವರ ಸ್ವಾಮೀಜಿ, ಶ್ರೀದೇವಿ ಪಾರಾಯಣ ಪಠಣಕಾರ ವೀರಣ್ಣಾಚಾರ್ಯ ಹೂಲಗೇರಿ ಸಾನ್ನಿಧ್ಯ ವಹಿಸುವರು. ರೋಣ ಶಾಸಕ ಜಿ.ಎಸ್ ಪಾಟೀಲ ಉದ್ಘಾಟಿಸುವರು. ಶ್ರೀ ಕಾಳಿಕಾದೇವಿ ಟ್ರಸ್ಟ್ ಕಮಿಟಿ ಅಧ್ಯಕ್ಷ ನಾರಾಯಣ ವಡ್ಡಟ್ಟಿ ಅಧ್ಯಕ್ಷತೆ ವಹಿಸುವರು.

ಅ.16ರಂದು ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, 5-14 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಅ.17ರಂದು ಸಮಾಜದ ದಾರ್ಶನಿಕರ ವಚನ ಸ್ತೋತ್ರ ಮತ್ತು ವೇಷಭೂಷಣ ಸ್ಪರ್ಧೆ, ಅ.19ರಂದು ಶ್ರೀ ಲಲಿತಾ ಸಹಸ್ರನಾಮ ಪಾರಾಯಣ, ಮುತ್ತೈದೆಯರಿಂದ ಶ್ರೀದೇವಿಗೆ ಸಹಸ್ರ ಕುಂಕುಮಾರ್ಚನೆ, ಅ.21ರಂದು ಮಹಾಸರಸ್ವತಿ ಪೂಜೆ, ಬಾಲ ಮಕ್ಕಳಿಗೆ ಅಕ್ಷರಾಭ್ಯಾಸ, ಅ.22 ಬೆಳಿಗ್ಗೆ 6 ಗಂಟೆಗೆ ಗಣಹೋಮ, ನವಗ್ರಹ ಹೋಮ, ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ.

ಅ.23ರಂದು ನವಕನ್ನಿಕೆಯರಿಗೆ ಪೂಜಾ ಹಾಗೂ ಖಂಡೆ(ಆಯುಧ) ಪೂಜಾ, ಅ.24ರಂದು ಮಧ್ಯಾಹ್ನ 4 ಗಂಟೆಗೆ ನೂತನ ಶ್ರೀದೇವಿ ಮೂರ್ತಿಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗುವುದು. ಶಮಿ ಪೂಜೆಯ ನಂತರ ಪುರಾಣ ಮಂಗಲೋತ್ಸವ ಜರುಗಲಿದೆ ಎಂದು ಶ್ರೀ ಕಾಳಿಕಾದೇವಿ ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಜಿಲ್ಲಾ ಯೋಜನೆಯಡಿ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಹೊಲಿಗೆಯಂತ್ರ, ಬಡಿಗತನ, ಧೋಬಿ ಹಾಗೂ ಕ್ಷೌರಿಕ ಸುಧಾರಿತ ಉಪಕರಣಗಳಿಗಾಗಿ ಕಾರ್ಯಕ್ರಮದಡಿ ಪೂರೈಸಲು gadag.nic.in ವೆಬ್‌ಸೈಟ್‌ನಲ್ಲಿ ಅಕ್ಟೋಬರ್ 16 ರಿಂದ ನವಂಬರ 20ರ ವರೆಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಆಹ್ವಾನಿಸಿದ್ದು, ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ 18 ರಿಂದ 45 ವರ್ಷದೊಳಗಿನ ಕುಶಲಕರ್ಮಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆನ್‌ಲೈನನಲ್ಲಿ ಸಲ್ಲಿಸಿದ 1 ಪ್ರತಿ ಅರ್ಜಿ ನಮೂನೆ ಹಾಗೂ ದಾಖಲೆಗಳನ್ನು ಕಚೇರಿಗೆ ಅಂಚೆ ಅಥವಾ ಖುದ್ದಾಗಿ ಬಂದು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮುಖ್ಯಸ್ಥರನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ : 08372-220506, 9731094945, 8095520402 ಅಥವಾ ಮೇಲ್ ಐಡಿ: dd-kvigadag@gmail.com ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸೋಮೇಶ್ವರ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಐತಿಹಾಸಿಕ ಸೋಮೇಶ್ವರ ದೇವಸ್ಥಾನದಲ್ಲಿ ದಸರಾ ಶರನ್ನವರಾತ್ರಿ ಹಬ್ಬದ ಆಚರಣೆ ಕುರಿತು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ, ಜಾತ್ರಾ ಕಮಿಟಿ ಹಾಗೂ ಸೋಮೇಶ್ವರ ದೇವಸ್ಥಾನ ಸೇರಿದಂತೆ ವಿವಿಧ ಅರ್ಚಕರು ದೇವಸ್ಥಾನ ಆವರಣದಲ್ಲಿ ಸಭೆ ಸೇರಿ, ಹಬ್ಬದ ಆಚರಣೆ ಕುರಿತು ಚರ್ಚೆ ನಡೆಸಿದರು.



ಈ ಹಿನ್ನೆಲೆಯಲ್ಲಿ ಅ.15ರಂದು ಘಟಸ್ಥಾಪನೆಯಾಗಲಿದ್ದು, 24ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಅ.23ರಂದು ಆಯುಧ ಪೂಜೆ(ಖಂಡೇಪೂಜೆ), 24ರಂದು ವಿಜಯದಶಮಿ ಆಚರಿಸಲು ನಿರ್ಧರಿಸಲಾಯಿತು. ಅ.24ರಂದು ಬನ್ನಿ ಮುಡಿಯುವ ಕಾರ್ಯಕ್ರಮದ ನಂತರ, ಸೋಮೇಶ್ವರ ದೇವರ ಪರಮಭಕ್ತರಾಗಿರುವ ನಾಗಪ್ಪ ಬಿಂಗಿಯವರು ಸೋಮೇಶ್ವರ ಪಲ್ಲಕ್ಕಿ ನಂತರ ಕಾರ್ಣಿಕವನ್ನು ನುಡಿಯುತ್ತಾರೆ. ಅ.15ರಿಂದ ನಿರಂತರ 10 ದಿನಗಳ ಕಾಲ ಸೋಮೇಶ್ವರ ದೇವರಿಗೆ ಬಂಗಾರ ಕಿರೀಟ ಧಾರಣೆ ಆಗಲಿದ್ದು, ಪ್ರತಿನಿತ್ಯ ವಿಶೇಷ ಪೂಜೆಗಳು ನೆರವೇರಲಿವೆ. ಭಕ್ತರು ಸಕಲ ಸಹಕಾರ ನೀಡಬೇಕೆಂದು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ, ಸೋಮೇಶ್ವರ ಜಾತ್ರಾ ಕಮಿಟಿ ಮತ್ತು ಅರ್ಚಕರ ಸಮಿತಿಯವರು ವಿನಂತಿಸಿದ್ದಾರೆ.

### ಸೇಡಂನಲ್ಲಿ ಬೃಹತ್ ಉದ್ಯೋಗ ಮೇಳದಲ್ಲಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ

# ಉದ್ಯೋಗ ಆಧಾರಿತ ಕೌಶಲ್ಯ ನಮ್ಮ ಗುರಿ

■ವಿಜಯಸಾಕ್ಷಿ ಸುದ್ದಿ, ಕಲಬುರಗಿ

ಪ್ರತಿಯೊಬ್ಬ ನಿರುದ್ಯೋಗಿ ಅಭ್ಯರ್ಥಿಗೆ ಉದ್ಯೋಗ ಆಧಾರಿತ ಕೌಶಲ್ಯ ನೀಡುವುದು ನಮ್ಮ ಗುರಿಯಾಗಿದೆ. ನಿರುದ್ಯೋಗಿಗಳು ಜಿ.ಟಿ.ಟಿ.ಸಿ, ಕೆ.ಜಿ.ಟಿ.ಟಿ.ಐ ಮೂಲಕ ನೀಡಲಾಗುವ ಅಲ್ಪಾವಧಿ ಕೋರ್ಸ್ ಸೌಲಭ್ಯ ಪಡೆದು ಉದ್ಯೋಗ ಗಿಟ್ಟಿಸಿಕೊಳ್ಳಬೇಕು ಎಂದು ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ. ಶರಣಪ್ರಕಾಶ ಪಾಟೀಲ ಕರೆ ನೀಡಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕಲಬುರಗಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಜಿಲ್ಲೆಯ ಸೇಡಂ ಪಟ್ಟಣದ ಕೆ.ಇ.ಬಿ, ರಸ್ತೆಯಲ್ಲಿರುವ ಮಿನಿ ವಿಧಾನ ಸೌಧದ ಆಡಿಟೋರಿಯಂ ಸಭಾಂಗಣದಲ್ಲಿ ಜರುಗಿದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.



ಸ್ಥಳೀಯವಾಗಿ ಉದ್ಯೋಗ ಸಿಗಬೇಕು, ಇಲ್ಲಿಯೇ ಕೆಲಸ ಮಾಡಬೇಕೆಂಬ ಮನೋಭಾವನೆ ಬಿಟ್ಟು ಎಲ್ಲಿ ಕೆಲಸ ಸಿಗುತ್ತೋ ಅಲ್ಲಿ ಹೋಗಿ ಕೆಲಸ ಮಾಡುವ ಪ್ರವೃತ್ತಿ ಈ ಭಾಗದವರಲ್ಲಿ ಹೆಚ್ಚಬೇಕಿದೆ. ಇದರಿಂದ ಹೊಸ ಅನುಭವ ಜೊತೆಗೆ ಜೀವನ ರೂಪಿಸಿಕೊಳ್ಳಲು ವೇದಿಕೆ ಸಿಗಲಿದೆ. ಉದ್ಯೋಗ ಸಿಕ್ಕರು ಕೌಶಲ್ಯ ಹೆಚ್ಚಿಸಿಕೊಳ್ಳುವ ಕೆಲಸ ನಿರಂತರವಾಗಿರಲಿ ಎಂದು ನಿರುದ್ಯೋಗಿಗಳಿಗೆ ಸಚಿವರು ಕಿವಿಮಾತು ಹೇಳಿದರು.

ಇಂದಿಲ್ಲಿ ಸುಮಾರು 110 ಕ್ಕೂ ಹೆಚ್ಚು ಕಂಪನಿಗಳು ಬಂದಿವೆ. 7500 ಕ್ಕೂ ಹೆಚ್ಚು ಜನ ನೋಂದಣಿ ಮಾಡಿಕೊಂಡಿದ್ದಾರೆ. 10 ಸಾವಿರ ಜನರ ನೋಂದಣಿಯ ಗುರಿ ಹೊಂದಿದ್ದೇವೆ. ಇಲ್ಲಿ ಕೆಲಸ ಸಿಗದವರು ನಿರಾಶರಾಗಬಾರದು ಎಂದು ಅಭಯ ನೀಡಿದ ಸಚಿವರು, ಕೌಶಲ್ಯಾಭಿವೃದ್ಧಿ ನಿಗಮದ ವೆಬ್‌ಸೈಟ್‌ನಲ್ಲಿ ಅಥವಾ ಇಂದಿಲ್ಲಿ ಆಫಲೈನ್ ನೋಂದಣಿ ಆಗಿ ಕೆಲಸ ಸಿಗದವರಿಗೆ ಕೌಶಲ್ಯಾಭಿವೃದ್ಧಿ ಇಲಾಖೆ ಮುಂದಿನ ದಿನದಲ್ಲಿ ಉದ್ಯೋಗಕ್ಕೆ ಬೇಕಾಗುವ ಕೌಶಲ್ಯ ತರಬೇತಿ ನೀಡಲಿದೆ ಎಂದರು.

ಜಿ.ಟಿ.ಟಿ.ಸಿ ಯಲ್ಲಿ ಡಿಪ್ಲೋಮಾ ಪಡೆದವರಿಗೆ ಶೇ.100ರಷ್ಟು ಉದ್ಯೋಗ ಖಾತ್ರಿಯಾಗಿದ್ದು, ಪ್ರವೇಶಕ್ಕೆ ಬೇಡಿಕೆ ಇರುವ ಕಾರಣ ಈ ವರ್ಷದಿಂದ ರಾಜ್ಯದ 33 ಜಿ.ಟಿ.ಟಿ.ಸಿಯಲ್ಲಿ ಕೆ.ಇ.ಎ. ಮೂಲಕ ಪಾರದರ್ಶಕವಾಗಿ ಪ್ರವೇಶಾತಿ ಕಲ್ಪಿಸಿದೆ. ಸುಮಾರು 3,000ಕ್ಕೂ ಹೆಚ್ಚಿನ ಅಭ್ಯರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕೆ.ಜಿ.ಟಿ.ಟಿ.ಐ ನಲ್ಲಿಯೂ 3 ರಿಂದ 6 ತಿಂಗಳ ಉಪಯುಕ್ತ ಉಚಿತ ತರಬೇತಿ ಲಭ್ಯವಿದೆ. ರಾಜ್ಯದ 150 ಐ.ಟಿ.ಯ ಸಂಸ್ಥೆಯನ್ನು ಉನ್ನತಿಕರಿಸಿದ್ದು, ಇಂಡಸ್ಟ್ರಿ 4.0 ತರಬೇತಿ ನೀಡಲಾಗುತ್ತದೆ. ಅಭ್ಯರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

**ಡಿಸೆಂಬರ್‌ನಲ್ಲಿ ಯುವ ನಿಧಿ ಜಾರಿಗೆ:**

ರಾಜ್ಯ ಸರ್ಕಾರ ನುಡಿದಂತೆ ನಡೆಯುತ್ತಿದ್ದು, ಪಂಚ ಗ್ಯಾರಂಟಿಯಲ್ಲಿ ಈಗಾಗಲೆ ಗೃಹ ಲಕ್ಷ್ಮೀ, ಗೃಹ ಜ್ಯೋತಿ, ಅನ್ನ ಭಾಗ್ಯ, ಶಕ್ತಿ ಯೋಜನೆ ಜಾರಿಗೊಳಿಸಿದೆ. ಡಿಸೆಂಬರ್ ಮಾಹೆಯಲ್ಲಿ ಡಿಪ್ಲೋಮಾ ನಿರುದ್ಯೋಗಿಗಳಿಗೆ ಮಾಸಿಕ 1,500 ರೂ. ಮತ್ತು ಪದವೀಧರರಿಗೆ ಮಾಸಿಕ 3,000 ರೂ. ನೀಡುವ ಯುವ ನಿಧಿ ಯೋಜನೆ ಜಾರಿಗೊಳಿಸಲಾಗುವುದು ಎಂದು ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

> ಸಾಮಾನ್ಯವಾಗಿ ಈ ಭಾಗದ ಜನ ಉದ್ಯೋಗ ಅರಸಿ ದೂರದ ಬೆಂಗಳೂರು, ಹೈದ್ರಾಬಾದಿಗೆ ಹೋಗ್ತಾರೆ. ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರ ಇಚ್ಛಾಶಕ್ತಿ ಪರಿಣಾಮ ಇಂದಿಲ್ಲಿಗೆ ಕೆಲಸ ನೀಡುವ ಕಂಪನಿಗಳೆ ನಿಮ್ಮ ಮನೆ ಬಾಗಿಲಿಗೆ ಬಂದಿವೆ. ಸ್ಥಳೀಯ ನಿರುದ್ಯೋಗಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು. ಉದ್ಯೋಗ ಆಧಾರಿತ ಕೌಶಲ್ಯ ಪಡೆಯಲು ಮುಂದಾಗಬೇಕು.
>
> -ಬಿ.ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿಗಳು, ಕಲಬುರಗಿ

**ಉದ್ಯೋಗ ಮೇಳದಲ್ಲಿ 108 ಕ್ಕೂ ಹೆಚ್ಚು ಕಂಪನಿಗಳು ಭಾಗಿ**

ಪ್ರಮುಖವಾಗಿ ಎಲ್. ಆಂಡ್ ಟಿ ಫೈನಾನ್ಸ್, ಮಲಬಾರ ಗೋಲ್ಡ್ ಆಂಡ್ ಡೈಮೆಂಡ್ಸ್, ಜೆ.ಎಸ್ .ಡಬ್ಲ್ಯೂ ಸ್ಟೀಲ್ ಲಿಮಿಟೆಡ್, ಟ್ರೇಡೆಂಟ್ ಆಟೋಮೊಬೈಲ್ಸ್ ಪ್ರೈವೇಟ್ ಲಿಮಿಟೆಡ್, ಆದಿತ್ಯ ಬಿರ್ಲಾ ಸನ್ ಲೈಫ್ ಇನ್ಶುರೆನ್ಸ್ ಕಂಪನಿ, ಕೆ.ಬಿ.ಎಲ್ ಸರ್ವಿಸಸ್ ಲಿಮಿಟೆಡ್, ಎಲ್‌ಐಸಿ ಆಫ್ ಇಂಡಿಯಾ, ಮಹೇಂದ್ರ ಆಂಡ್ ಮಹೇಂದ್ರಾ ಎ.ಡಿ.-ಜಹೀರಾಬಾದ್, ಅಲ್ಟಾಟೆಕ್ ಸಿಮೆಂಟ್ ಲಿಮಿಟೆಡ್, ಸೇಡಂ ತಾಲೂಕಿನ ಕೊಡ್ಲಾದ ಶ್ರೀ ಸಿಮೆಂಟ್ ಹಾಗೂ ಲೇಬರ್‌ನೆಟ್ ಸರಇಟ್ ಲಿಮಿಟೆಡ್ ಕಂಪನಿಗಳು ಭಾಗವಹಿಸಿದ್ದವು.

# ಉದ್ಯಾನವನಗಳಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದ ಅಂಗವಾಗಿ ಅಕ್ಟೋಬರ್ 15 ರಂದು ರವಿವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಡಾ॥ನಾರಾಯಣ ಎ ಹಿರೇಕೊಳಚಿ ರವರಿಂದ "ಭಜನ್" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಕು.ಎ.ಎಂ.ಪಿ ಸುಧಾ ಇವರಿಂದ "ಶಾಸ್ತ್ರೀಯ ಸಂಗೀತ" ಸಾಯಂಕಾಲ 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಶ್ರೀ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಶಿವಶಂಕರ ದೊಡ್ಡಮನಿ ಇವರಿಂದ "ಭಾವಗೀತೆ" ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕರ್ನಾಟಕ ಸರಕಾರ

**ಪುರಸಭೆ ಕಾರ್ಯಾಲಯ, ಮುಂಡರಗಿ – 582118**

ದೂರವಾಣಿ/ಫ್ಯಾಕ್ಸ್ : 08371-206638-262232

Email : itstaff_ulb_mundargi@yahoo.co.in

ಸಂಖ್ಯೆ:ಪುಸಮುಂ/ಸ್ಟೇಶ್ನರಿ/ಟೆ.ಪ್ರ/2023-24 ದಿನಾಂಕ: 12-10-2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಸನ್: 2023-24 ನೇ ಸಾಲಿಗೆ (**31-03-2024** ರ ವರೆಗೆ) ಪುರಸಭೆ ದಿನನಿತ್ಯದ ಕಚೇರಿ ಕೆಲಸಕಾರ್ಯಗಳ ನಿರ್ವಹಣೆಗೆ ಆಯಾ ಕಾಲಕ್ಕೆ ಅವಶ್ಯಕತೆ ಇರುವ ಸಾಮಗ್ರಿಗಳನ್ನು ಖರೀದಿಸಲು ಉದ್ದೇಶಿಸಿದ್ದು, ಪೂರೈಕೆ ಆದೇಶದ ಪ್ರಕಾರ ಪುರಸಭೆಗೆ ಲೇಖನಿ/ಸ್ಟೇಶ್ನರಿ ಸಾಮಗ್ರಿಗಳನ್ನು ಪೂರೈಸಲು ಇಚ್ಛೆಯುಳ್ಳ ಅಧಿಕೃತ ಪೂರೈಕೆದಾರಿಂದ ಈ ಟೆಂಡರ್ ಫಾರ್ಮದಲ್ಲಿರುವ ಷರತ್ತುಗಳಿಗೊಳಪಟ್ಟು ವಾರ್ಷಿಕ ಟೆಂಡರ್ ದರಪಟ್ಟಿಯನ್ನು ಆಹ್ವಾನಿಸಿದೆ.

(1) <u>ಸಾಮಗ್ರಿಗಳ ವಿವರ</u> : ಲೇಖನಿ ಸಾಮಗ್ರಿಗಳು, ದಪ್ತರಗಳು, ಸ್ಟೇಶ್ನರಿ ಸಾಮಗ್ರಿಗಳು (ಸಾಮಗ್ರಿಗಳ ವಿವರವನ್ನು ಟೆಂಡರ್ ಫಾರ್ಮನಲ್ಲಿ ನೀಡಲಾಗುವುದು.), ಇ.ಎಂ.ಡಿ. ಮೊತ್ತ **5,000-00**.

(1) ಟೆಂಡರ್ ಫಾರ್ಮಿಗಾಗಿ ಅರ್ಜಿ ಸಲ್ಲಿಸುವ ದಿನಾಂಕ : **21-10-2023** ಸಂಜೆ: 5.30 ಗಂಟೆ ವರೆಗೆ. (2) ಖಾಲಿ ಟೆಂಡರ್ ಫಾರ್ಮ ನೀಡುವ ದಿನಾಂಕ : **25-10-2023** ಸಂಜೆ: 5.30 ಗಂಟೆ ವರೆಗೆ (3) ಭರ್ತಿ ಮಾಡಿದ ಟೆಂಡರ್ ಪೆಟ್ಟಿಗೆಗೆ ಹಾಕುವ ದಿನಾಂಕ : **27-10-2023** ಸಂಜೆ 4.30 ಗಂಟೆಗೆ. (4) ಟೆಂಡರ್ ಫಾರ್ಮ ಫೀ ರೂ. **500/-** ಗಳು

ಸಹಿ/- ಮುಖ್ಯಾಧಿಕಾರಿ,
ಪುರಸಭೆ, ಮುಂಡರಗಿ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/255/2023-24

# ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದಲ್ಲಿ ಕಳೆದ ವರ್ಷ ಜೀರ್ಣೋದ್ಧಾರಗೊಂಡ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ 10 ದಿನಗಳ ಕಾಲ ವೈಭವದಿಂದ ನವರಾತ್ರಿ ಉತ್ಸವ ನಡೆಸುವ ನಿಟ್ಟಿನಲ್ಲಿ, ಪಟ್ಟಣದ ಎಸ್‌ಎಸ್‌ಕೆ ಸಮಾಜ ಮತ್ತು ಶ್ರೀ ಅಂಬಾಭವಾನಿ ದೇವಸ್ಥಾನ ಸೇವಾ ಸಮಿತಿಯವರು ಸಕಲ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ.



ಅ.15 ರಂದು ಮುಂಜಾನೆ 9.15ಕ್ಕೆ ಶ್ರೀದೇವಿಗೆ ಏಕಾದಶ ದ್ರವ್ಯ ಅಭಿಷೇಕ ನೆರವೇರಲಿದ್ದು, 11 ಗಂಟೆಗೆ 10 ದಿನಗಳ ದಸರಾ ಹಬ್ಬಕ್ಕೆ ಚಾಲನೆ ನೀಡಲಾಗುವದು. ಕಾರ್ಯಕ್ರಮವನ್ನು ಯುವ ಮುಖಂಡ ಆನಂದ ಗಡ್ಡದೇವರಮಠ ದಂಪತಿಗಳು ಹಾಗೂ ಲೋಕಾಯುಕ್ತ ಡಿವಾಯ್‌ಎಸ್‌ಪಿ ಶಂಕರ ರಾಗಿ ದಂಪತಿಗಳು ಉದ್ಘಾಟಿಸುವರು.

ಅ.15ರಿಂದ ಅ.24ರವರೆಗೆ ಪ್ರತಿನಿತ್ಯ ಬೆಳಿಗ್ಗೆ 5.30 ರಿಂದ 7 ಗಂಟೆಯವರೆಗೆ ಭಾವಸಾರ ಕ್ಷತ್ರಿಯ ಸಮಾಜ, ಗೋಂದಳಿ ಸಮಾಜ ಹಾಗೂ ಎಸ್‌ಎಸ್‌ಕೆ ಸಮಾಜದವರಿಂದ ಕಾಕಡಾರತಿ ಹಾಗೂ ಮಹಾಮಂಗಳಾರತಿ ನೆರವೇರಲಿದೆ. ಎಸ್‌ಎಸ್‌ಕೆ ಮಹಿಳಾ ಮಂಡಳದವರಿಂದ ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮಗಳು ನಿತ್ಯ ಜರುಗಲಿವೆ.

ಅ.19ರಂದು ಲಲಿತಾ ಪಂಚಮಿ(ಪಾಚಿ ಫುಲಾರ), ಅ.22ರಂದು ದುರ್ಗಾಷ್ಟಮಿ(ಅಷ್ಟಮಿ ಪೂಜೆ), ಅ.23ರಂದು ಮಹಾನವಮಿ, ಆಯುಧಪೂಜೆ ನೆರವೇರಲಿದೆ. ಅ.24ರಂದು ಬೆಳಿಗ್ಗೆ ಕಾಕಡಾರತಿ, 8.30ಕ್ಕೆ ಹ.ಬ.ಪ.ನಾರಾಯಣರಾವ್ ಬಿಸೆ ಇವರಿಂದ ಪ್ರವಚನ, ಸಂಜೆ 6 ಗಂಟೆಗೆ ಎಲ್ಲ ಸಮಾಜದವರೊಂದಿಗೆ ಸೇರಿ ಬನ್ನಿ ಮುಡಿಯುವ ಕಾರ್ಯಕ್ರಮ, ಅದೇ ರಾತ್ರಿ ಸೀಮೋಲ್ಲಂಘನೆ ಕಾರ್ಯಕ್ರಮ ನೆರವೇರಲಿದೆ.

ಇದರೊಂದಿಗೆ ವಿವಿಧ ಮನರಂಜನಾ ಕಾರ್ಯಕ್ರಮಗಳು ಜರುಗಲಿವೆ ಎಂದು ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಪರಶುರಾಮಸಾ ಬದಿ ಮತ್ತು ಉಪಾಧ್ಯಕ್ಷ ನಾರಾಯಣ ಪವಾರ ತಿಳಿಸಿದ್ದಾರೆ.

### ಅಡವೀಂದ್ರ ಸ್ವಾಮಿ ಮಠದಲ್ಲಿ ದಸರಾ-ಜಾತ್ರಾ ಕಾರ್ಯಕ್ರಮ

# ನಾಳೆ ಧರ್ಮ ಧ್ವಜಾರೋಹಣ, ಪುರಾಣ ಪ್ರಾರಂಭ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ಅಡವೀಂದ್ರ ಸ್ವಾಮಿ ಮಠದಲ್ಲಿ ದಸರಾ ಮಹೋತ್ಸವ, ಶ್ರೀದೇವಿ ಪುರಾಣ ಪ್ರವಚನ, ಅನ್ನಪೂರ್ಣೇಶ್ವರಿ ದೇವಿ ಮಹಾರಥೋತ್ಸವದ ಅಂಗವಾಗಿ ಅ.15ರಂದು ಮುಂಜಾನೆ 9 ಗಂಟೆಗೆ ಧರ್ಮ ಧ್ವಜಾರೋಹಣ ನಡೆಯಲಿದೆ.



ಅಡ್ನೂರ-ಗದುಗಿನ ಪೂಜ್ಯ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಸಮ್ಮುಖವನ್ನು ಶ್ರೀಮಠದ ಧರ್ಮದರ್ಶಿ ಮಹೇಶ್ವರ ಸ್ವಾಮಿಗಳು ಹೊಸಳ್ಳಿಮಠ ವಹಿಸುವರು.

ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಪ್ರಕಾಶ ಬಂಡಿ ಧ್ವಜಾರೋಹಣ ನೆರವೇರಿಸುವರು. ನಿಂಗಪ್ಪ ಬಳಿಗಾರ ಪ್ರಾಸ್ತಾವಿಕವಾಗಿ ಮಾತನಾಡುವರು.

ಜಾತ್ರಾ ಮಹೋತ್ಸವದ ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಮೀಳಾದೇವಿ ಬಳಿಗಾರ, ಕಾರ್ಯಾಧ್ಯಕ್ಷ ಬಸವರಾಜ ಪಲ್ಲೇದ, ಶರಣಯ್ಯಶಾಸ್ತ್ರೀ ಶಿವಪ್ಪಯ್ಯನಮಠ, ಶಿವಾನುಭವ ಸಮಿತಿಯ ಅಧ್ಯಕ್ಷ ವ್ಹಿ.ಎಂ ಕುಂದ್ರಾಳಹಿರೇಮಠ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ವಿಜಯಕುಮಾರ ಹಿರೇಮಠ, ನಂದಿನಿ ಹಿರೇಮಠ ಆಗಮಿಸುವರು.

ಸಂಜೆ 6.30ಕ್ಕೆ ಘಟಸ್ಥಾಪನೆ ಹಾಗೂ ಶ್ರೀದೇವಿ ಪುರಾಣ ಪ್ರಾರಂಭೋತ್ಸವ ನಡೆಯಲಿದೆ. ಶಿರಕೋಳ ಹಿರೇಮಠದ ಪೂಜ್ಯ ಗುರುಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ನಿವೃತ್ತ ಶಿಕ್ಷಕಿ ಯಶೋಧಾ ಗಿಡ್ನಂದಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಶಿಕ್ಷಕ ಬಸವರಾಜ ಗಿಡ್ನಂದಿ, ನಿವೃತ್ತ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಆರ್. ಎನ್ ಪಾಟೀಲ, ಡಾ. ರಾಜಶ್ರೀ ಪಾಟೀಲ ಆಗಮಿಸುವರು.

ಡಾ. ರಾಜಗುರು ಗುರುಸ್ವಾಮಿ ಕಲಕೇರಿ ಗವಾಯಿಗಳಿಂದ ಪ್ರವಚನ ಆರಂಭಗೊಳ್ಳುವದು. ಚನ್ನಬಸಯ್ಯ ಶಾಸ್ತ್ರೀ ಹೇಮಗಿರಿಮಠ ಪುರಾಣ ಪಠಿಸುವರು. ಸುಕ್ರುಸಾಬ ಮುಲ್ಲಾ, ಜಗನ್ನಾಥ ಕಲಬುರ್ಗಿ, ಗುರುನಾಥ ಸುತಾರ, ಎಸ್.ಬಿ ಭಜಂತ್ರಿ ಅವರಿಂದ ಸಂಗೀತ ನಡೆಯಲಿದೆ.

ಅ.16ರಂದು ಸಂಜೆ 6.30ಕ್ಕೆ ನಡೆಯುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ, ಮುಖ್ಯಸ್ಥರಾದ ಡಾ. ಸಿ.ಎಂ ರಫಿ, ನಾಜ್ಮೀನಬಾನು ಸಿ.ರಫಿ, ಅನಿಲ ತೆಂಬದಮನಿ, ಪಲ್ಲವಿ ತೆಂಬದಮನಿ ಆಗಮಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಕರ್ನಾಟಕ ವಿಜ್ಞಾನ, ತಂತ್ರಜ್ಞಾನ ಅಕಾಡೆಮಿಯಿಂದ ರಾಷ್ಟ್ರೀಯ ಸಮ್ಮೇಳನ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು Climate Resilience and Sustainable Development ವಿಷಯದ ಮೇಲೆ ನವೆಂಬರ್ 22 ರಿಂದ 24ರ ವರೆಗೆ ನಡೆಯುವ ರಾಷ್ಟ್ರೀಯ ಸಮ್ಮೇಳನವನ್ನು ಅಕಾಡೆಮಿಯ ಕಚೇರಿಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರೋ. ಯು. ಆರ್. ರಾವ್ ವಿಜ್ಞಾನ ಭವನ, ಜಿ.ಕೆ.ವಿ.ಕೆ. ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ವಿದ್ಯಾರಣ್ಯಪುರ ಪೋಸ್ಟ್ ಬೆಂಗಳೂರು. ದೂರವಾಣಿ ಸಂಖ್ಯೆ: 080-29721550 ಆಯೋಜಿಸಲಾಗುತ್ತಿದೆ.

ಕಾರ್ಯಾಗಾರದಲ್ಲಿ ನುರಿತ ಸಂಪನ್ಮೂಲ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಸಮ್ಮೇಳನದಲ್ಲಿ ಪೇಪರ್ ಪ್ರಸೆಂಟೇಷನ್ ಆಂಡ್ ವರ್ಕಿಂಗ್ ಮಾಡೆಲ್ ಸಹ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ ಪೇಪರ್ ಆಂಡ್ ಮಾಡೆಲ್ ಅಭ್ಯರ್ಥಿಗಳಿಗೆ ಬಹುಮಾನವನ್ನು ನೀಡಲಾಗುವುದು.

ಸಮ್ಮೇಳನದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಸಂಶೋಧಕರು, ವಿಜ್ಞಾನಿಗಳು ಹಾಗೂ ಪ್ರಾಧ್ಯಾಪಕರು, ಉಪನ್ಯಾಸಕರು ಭಾಗವಹಿಸಬಹುದಾಗಿದ್ದು, ನಿಗದಿತ ಶುಲ್ಕವನ್ನು ನವೆಂಬರ್ 15ರೊಳಗಾಗಿ ಆನ್‌ಲೈನ್‌ನಲ್ಲಿ https://forms.gle/VBZdYHc awb4uU9Jb9 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು : 9845258894 ಅಥವಾ ಅಕಾಡಮಿಯ ವೆಬ್‌ಸೈಟ್ www.kstacademy.in ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಡಾ. ಬಿ.ಆರ್ ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ ವಾಹನ ವಿತರಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಡಾ. ಬಿ.ಆರ್ ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ ಛಲವಾದಿ ಜನಾಂಗದ ಯುವಕರಿಗೆ ದ್ವಿಚಕ್ರ ಮತ್ತು ತ್ರಿಚಕ್ರ (ಅಟೋ)ವಾಹನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ ಅಸೂಟಿ, ಪೀರಸಾಬ ಕೌತಾಳ, ಬರಕತಅಲಿ ಮುಲ್ಲಾ, ಆನಂದ ಸಿಂಗಾಡಿ, ಗುರುರಾಜ ಸಂಕಣ್ಣವರ, ಶರೀಫ ಬಿಳೆಯಲಿ, ರವಿ ತಮ್ಮಣ್ಣವರ, ಪ್ರಶಾಂತ ದೊಡ್ಡಮನಿ, ಸುರೇಶ ಸಿಂಗಾಡಿ ಮತ್ತು ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಶಂಭು ಎನ್. ಕಾಳೆ ಉಪಸ್ಥಿತರಿದ್ದರು.

# ಇಂದು ಕಿತ್ತೂರು ಚನ್ನಮ್ಮಾಳ ವಿಜಯ ವೀರಜ್ಯೋತಿ ಯಾತ್ರೆ ಆಗಮನ

**■ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಸಕ್ತ ಸಾಲಿನ ಐತಿಹಾಸಿಕ ಕಿತ್ತೂರು ಉತ್ಸವದ ಅಂಗವಾಗಿ ಅಕ್ಟೋಬರ್ 13 ರಂದು ಕಿತ್ತೂರು ಚನ್ನಮ್ಮಾಜೀಯವರ ವಿಜಯ ವೀರಜ್ಯೋತಿ ಯಾತ್ರೆಯು ಬೆಂಗಳೂರಿನಿಂದ ಪ್ರಾರಂಭವಾಗಿ ಅಕ್ಟೋಬರ್ 14 ರಂದು ಶನಿವಾರ ಸಾಯಂಕಾಲ 4 ಗಂಟೆಗೆ ಹಾವೇರಿ ಮಾರ್ಗವಾಗಿ ಗದಗ ನಗರಕ್ಕೆ ಆಗಮಿಸಲಿದೆ.

ಗದಗ ನಗರಕ್ಕೆ ಆಗಮಿಸುವ ವಿಜಯ ವೀರಜ್ಯೋತಿಯನ್ನು ಬರಮಾಡಿಕೊಂಡು ನಗರದ ಪ್ರವಾಸಿ ಮಂದಿರದಲ್ಲಿ ವೀರಜ್ಯೋತಿಯ ಪೂಜಾ ಕಾರ್ಯಕ್ರಮ ನೆರವೇರಿಸಲಾಗುವದು. ಸಾಯಂಕಾಲ 5 ಗಂಟೆಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆಯ ಮೂಲಕ ವೀರಜ್ಯೋತಿಯನ್ನು ಬೀಳ್ಕೊಡಲಾಗುವುದು. ಜಿಲ್ಲೆಯ ಎಲ್ಲ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ವೀರಜ್ಯೋತಿ ಬೀಳ್ಕೊಡುಗೆ ಕಾರ್ಯಕ್ರಮ ಯಶಸ್ವಿಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

### ಮಕ್ಕಳ ಗ್ರಾಮಸಭೆ ಮೂಲಕ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸಿ: ಶೇಖರಗೌಡ ರಾಮತ್ನಾಳ

# ನಿರ್ಲಕ್ಷ್ಯ ತೋರಿದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಗ್ರಾಮ ಸಭೆಗಳನ್ನು ನಿಯಮಿತವಾಗಿ ಆಯೋಜಿಸುವದರ ಮೂಲಕ ಮಕ್ಕಳ ಹಕ್ಕುಗಳ ಕುರಿತು ಜಾರಿ ಇರುವ ಎಲ್ಲ ಕಾರ್ಯಕ್ರಮಗಳನ್ನು ಜರುಗಿಸುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ರಾಮತ್ನಾಳ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶುಕ್ರವಾರ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದೊಂದಿಗೆ ತಾಲೂಕು ಮಟ್ಟದ ಸಮಿತಿಗಳ ರಚನೆ ಮತ್ತು ಕಾರ್ಯಚಟುವಟಿಕೆಗಳ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ ಮಕ್ಕಳ ಗ್ರಾಮ ಸಭೆಯನ್ನು ಆಯೋಜಿಸಬೇಕು. ಗ್ರಾಮ ಸಭೆಯಲ್ಲಿ ಮಕ್ಕಳ ಅಹವಾಲು, ಕುಂದು ಕೊರತೆಗಳನ್ನು ಆಲಿಸಿ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ಕುರಿತು ಇರುವ ಕಾನೂನುಗಳ ಅರಿವು ಮೂಡಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ ಮನೋಭಾವ ತೋರಿದಲ್ಲಿ ಸಂಬಂಧಿತ ಅಧಿಕಾರಿಗಳ ಮೇಲೆ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವದು ಎಂದು ಎಚ್ಚರಿಕೆ ನೀಡಿದರು.

ದೇಶದ ಜನಸಂಖ್ಯೆಯ ಶೇ 40ರಷ್ಟು ಪ್ರಮಾಣ ಮಕ್ಕಳಿದ್ದು, ಅವರ ಹಕ್ಕುಗಳ ಕುರಿತು ಅರಿವು ಮೂಡಿಸುವದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಗ್ರಾಮ ಸಭೆ ಆಯೋಜನೆಗೂ ಮುನ್ನ ಪೂರ್ವಭಾವಿ ಸಭೆಗಳನ್ನು ಆಯೋಜಿಸಬೇಕು. ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಕ್ಲಬ್‌ಗಳನ್ನು ರಚಿಸಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಮತ್ತೆ ಶಾಲೆಗೆ ಸೇರಿಸುವುದರ ಮೂಲಕ ಅವರನ್ನು ಮುಖ್ಯ ವಾಹಿನಿಗೆ ತರುವ ಕಾರ್ಯ ಪಂಚಾಯಿತಿಗಳಿಂದ ಆಗಬೇಕಾಗಿದೆ.

ತಾ.ಪಂ ಹಾಗೂ ಗ್ರಾ.ಪಂ ವ್ಯಾಪ್ತಿಯಲ್ಲಿನ ಫಲಾನುಭವಿಗಳಿಗೆ ಸೌಲಭ್ಯಗಳ ವಿತರಣೆ ಸಂದರ್ಭದಲ್ಲಿ ಫಲಾನುಭವಿಗಳಿಂದ ಬಾಲ್ಯ ವಿವಾಹ ಮಾಡಿಸುವುದಿಲ್ಲ, 8ನೇ ತರಗತಿವರೆಗೆ ಮಗುವನ್ನು ಶಾಲೆಯಿಂದ ಹೊರಗುಳಿಸುವುದಿಲ್ಲ ಎಂಬ ಮುಚ್ಚಳಿಕೆ ಪತ್ರವನ್ನು ಬರೆಯಿಸಿಕೊಳ್ಳಲು ಶೇಖರಗೌಡ ರಾಮತ್ನಾಳ ಸಲಹೆ ನೀಡಿದರು.

ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಬಾಲ್ಯ ವಿವಾಹ ನಿಷೇಧಾಧಿಕಾರಿಗಳಾಗಿದ್ದು, ತಮ್ಮ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹಗಳನ್ನು ನಿಯಂತ್ರಿಸುವದು ತಮ್ಮ ಆದ್ಯ ಕರ್ತವ್ಯವಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹ ಕಂಡು ಬಂದಲ್ಲಿ ಬಾಲ್ಯ ವಿವಾಹವನ್ನು ತಡೆದು ಕೂಡಲೇ ಪ್ರಕರಣ ದಾಖಲಿಸಬೇಕು. ಗ್ರಾ.ಪಂಗಳಲ್ಲಿ ತಮ್ಮ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮಕ್ಕಳಿಗಾಗಿ ವಿಶೇಷ ಅನುದಾನ ಮೀಸಲಿಡುವದರ ಜೊತೆಗೆ ಮಕ್ಕಳ ಸ್ನೇಹಿ ಪಂಚಾಯತಗಳನ್ನಾಗಿಸಬೇಕು. ಇದರೊಂದಿಗೆ ಮಕ್ಕಳು ಕಾಣೆಯಾಗುತ್ತಿರುವ ಕುರಿತು ರಚಿಸಲಾದ ಸಮಿತಿಗಳು ನಿಯಮಿತವಾಗಿ ಸಭೆಗಳನ್ನು ಜರುಗಿಸಬೇಕು ಎಂದು ಹೇಳಿದರು.

ಮಕ್ಕಳ ಗ್ರಾಮ ಸಭೆಯಲ್ಲಿ ತಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಹದಿನೆಂಟು ವರ್ಷದೊಳಗಿನ ಪ್ರತಿ ಮಗುವಿಗೆ ಲಸಿಕಾಕರಣ ಆಗಿರುವ, ಶಾಲೆಯಿಂದ ಹೊರಗುಳಿದ, ಬಾಲ್ಯ ವಿವಾಹ ಪ್ರಕರಣ, ಮಕ್ಕಳ ಮೇಲಿನ ದೌರ್ಜನ್ಯ ಕುರಿತು ಹೆಚ್ಚಿನ ಚರ್ಚೆ ಆಗಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ವಾಯ್ ಶೆಟ್ಟೆಪ್ಪನವರ, ಜಿ.ಪಂ ಮುಖ್ಯ ಯೋಜನಾ ನಿರ್ದೇಶಕ ಎಂ.ವಿ ಚಳಗೇರಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಮಣ್ಣೂರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

# ದಲಿತ ಸಾಹಿತ್ಯ ಪರಿಷತ್ತಿನ 30ನೇ ವರ್ಷಾಚರಣೆ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತೋಂಟದಾರ್ಯ ಮಠದಲ್ಲಿರುವ ಡಾ. ಎಂ.ಎಂ ಕಲಬುರ್ಗಿ ಸಂಶೋಧನಾ ಕೇಂದ್ರದಲ್ಲಿ ಇಂದು ಶನಿವಾರ ಮಧ್ಯಾಹ್ನ 3.30ಕ್ಕೆ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ ಹಾಗೂ ಜಿಲ್ಲಾ ಘಟಕಗಳ 30ನೇ ವರ್ಷದ ವರ್ಷಾಚರಣೆ, ಪುಸ್ತಕ ಬಿಡುಗಡೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಸ್ಕೃತಿ ಚಿಂತಕರಾದ ಡಾ. ಜಿ.ಬಿ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಪುಸ್ತಕ ಬಿಡುಗಡೆ ಮಾಡುವರು. ಶಾಯರಿ ಕವಿಗಳಾದ ಮರುಳಸಿದ್ದಪ್ಪ ದೊಡ್ಡಮನಿ ಪುಸ್ತಕ ಪರಿಚಯಿಸುವರು. ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಸದಸ್ಯ ಎಂ.ಸಿ ಕಟ್ಟಿಮನಿ, ಕವಿಗಳಾದ ಈರಣ್ಣ ಮಾದರ ಉಪಸ್ಥಿತಿ ವಹಿಸುವರು. ಶಿಲ್ಪಾ ಮ್ಯಾಗೇರಿ ಅತಿಥಿಗಳಾಗಿ ಭಾಗವಹಿಸುವರು. ಸುಮಾರು 20 ಕವಿಗಳಿಂದ ಕವಿಗೋಷ್ಠಿ ಜರುಗಲಿದ್ದು, ಆಸಕ್ತರು ಕಾರ್ಯಕ್ರಮದಲ್ಲಿ ಹಾಜರಿರಲು ಪ್ರಕಟಣೆ ತಿಳಿಸಿದೆ.

# 'ಸ್ನೇಹಜೀವಿ ಕಲಾ ತಂಡ'ದಿಂದ ಪರಿಸರ ಸಂರಕ್ಷಣೆಗಾಗಿ ಪಾದಯಾತ್ರೆ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಕಳಕಾಪೂರದ 'ಸ್ನೇಹಜೀವಿ ಕಲಾ ತಂಡ'ದ ಸದಸ್ಯರು ಅ.15ರಿಂದ 19ರವರೆಗೆ ಕಳಕಾಪೂರದಿಂದ ಕಪ್ಪತಗುಡ್ಡದವರೆಗೆ ಪರಿಸರ ಸಂರಕ್ಷಣೆ ಜಾಗೃತಿ ಅಭಿಯಾನದ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ ಎಂದು ಶಿಕ್ಷಕ ಶರಣು ಹೆಬ್ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾದಯಾತ್ರೆಯು ಆಧುನಿಕ ಗಾಂಧೀಜಿ ಎಂದು ಹೆಸರುವಾಸಿಯಾದ ಕರ್ಕಿಕಟ್ಟಿ ಗ್ರಾಮದ ಮುತ್ತಣ್ಣ ತಿರ್ಲಾಪೂರ, ಶಿಕ್ಷಕರಾದ ಶರಣು, ಶಂಕರ ಜಾಧವ ಅವರ ನೇತೃತ್ವದಲ್ಲಿ ನಡೆಯಲಿದೆ. ಅ.15 ಕಳಕಾಪೂರ, ಮಾರನಬಸರಿ, ಜಕ್ಕಲಿ, ಅಬ್ಬಿಗೇರಿಯಲ್ಲಿ ವಾಸ್ತವ್ಯ, ಅ.16 ಯರೇಬೇಲೇರಿ, ಕುರಡಗಿ, ಕಿರಟಗೇರಿ, ಹುಯಿಲಗೋಳದಲ್ಲಿ ವಾಸ್ತವ್ಯ, ಅ.17 ಹಿರೇಕೊಪ್ಪ, ಚಿಕ್ಕೊಪ್ಪ, ಬೆಟಗೇರಿ, ಗದಗದಲ್ಲಿ ವಾಸ್ತವ್ಯ, ಅ.18 ಬಿಂಕದಕಟ್ಟಿಯಲ್ಲಿ ವಾಸ್ತವ್ಯ, ಅ.19ರಂದು ಕಪ್ಪತಗುಡ್ಡವನ್ನು ತಲುಪಲಾಗುವುದು ಎಂದರು.

ಪಾದಯಾತ್ರೆಯಲ್ಲಿ ಪರಿಸರ ಸಂರಕ್ಷಣೆ ಜಾಗೃತಿಯ ನಾಟಕ, ಕೋಲಾಟದ ಪದ, ಏಕಪಾತ್ರಾಭಿನಯ, ಡೊಳ್ಳು ಕುಣಿತ ಇನ್ನು ಅನೇಕ ಕಲೆಗಳ ಮೂಲಕ ಪರಿಸರ ಜಾಗೃತಿಯನ್ನು ತಂಡದ ಸದಸ್ಯರು ಮೂಡಿಸಲಿದ್ದಾರೆ ಎಂದು ತಿಳಿಸಿದರು.

ಪರಿಸರ ಸಂರಕ್ಷಣೆಯ ಘೋಷವಾಕ್ಯಗಳಿರುವ ಪ್ರಕಟಣೆಯ ಸಂದೇಶಗಳನ್ನು ಈ ಕಾರ್ಯಕ್ರಮದ ಸಂದರ್ಭದಲ್ಲಿ ವಿತರಿಸಲಾಗುತ್ತದೆ ಎಂದವರು ತಿಳಿಸಿದರು.

# ಸಿ.ಸಿ ರಸ್ತೆ ಕಾಮಗಾರಿಯ ಭೂಮಿ ಪೂಜಾ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳಿಂದ ದತ್ತು ಪಡೆದ ಗದುಗಿನ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆ ಮುಂಭಾಗದಿಂದ ಬಸವೇಶ್ವರ ಪ್ರೌಢಶಾಲೆಯವರೆಗೆ ಗದಗ-ಬೆಟಗೇರಿ ನಗರಸಭೆ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಕಾಂಕ್ರೀಟ್ ರಸ್ತೆ ಕಾಮಗಾರಿಯ ಭೂಮಿ ಪೂಜಾ



ಕಾರ್ಯಕ್ರಮ ಅ.16ರಂದು ಬೆಳಿಗ್ಗೆ 10 ಗಂಟೆಗೆ ನೆರವೇರಲಿದೆ ಎಂದು 34ನೇ ವಾರ್ಡಿನ ನಗರಸಭೆ ಸದಸ್ಯೆ ವಿದ್ಯಾವತಿ ಗಡಗಿ ತಿಳಿಸಿದ್ದಾರೆ.

ಭೂಮಿ ಪೂಜಾ ಕಾರ್ಯಕ್ರಮಕ್ಕೆ 34ನೇ ವಾರ್ಡಿನ ಗುರು-ಹಿರಿಯರು ಹಾಗೂ ಉಭಯ ಶಾಲೆಯ ಸಿಬ್ಬಂದಿ ವರ್ಗದವರು, ಹಿತೈಷಿಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿದ್ಯಾವತಿ ಗಡಗಿ ವಿನಂತಿಸಿದ್ದಾರೆ.

# ಮರಾಠಾ ವಿದ್ಯಾವರ್ಧಕ ಸಂಘದಿಂದ ದಸರಾ ಉತ್ಸವ

**■ವಿಜಯಸಾಕ್ಷಿ ಸುದ್ದಿ, ಗದಗ**

ಮರಾಠಾ ವಿದ್ಯಾವರ್ಧಕ ಸಂಘ ಗದಗ-ಬೆಟಗೇರಿ ವತಿಯಿಂದ ಇದೇ ಆಶ್ವೀಜ ಶುದ್ಧ ಪ್ರತಿಪದ ರವಿವಾರ ಅ.15ರಂದು ಬೆಳಿಗ್ಗೆ 6.30 ಗಂಟೆಗೆ ದುರ್ಗಾ ದೌಡ್, ಶ್ರೀದೇವಿಗೆ ಪಂಚಾಮೃತ ಅಭಿಷೇಕ, ವಿಶೇಷ ಪೂಜೆಯೊಂದಿಗೆ ನವರಾತ್ರಿ ಉತ್ಸವ ಪ್ರಾರಂಭ, ಸಾಯಂಕಾಲ ಘಟಸ್ಥಾಪನೆ, ಅಂದಿನಿಂದ ಅ.23ರವರೆಗೆ ಪ್ರತಿನಿತ್ಯ ಸಾಯಂಕಾಲ 7ರಿಂದ 8 ಗಂಟೆಯವರೆಗೆ ಹ.ಬ.ಫ. ಶ್ರೀ ರಮೇಶ ಮ. ಶೇಂಡ್ಗೆ ಗದಗ ಇವರಿಂದ ಪುರಾಣ ಪ್ರವಚನ ನಡೆಯುವದು.

ಅ.20ರಂದು ರಾತ್ರಿ 8 ಗಂಟೆಗೆ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ನಂತರ ಮಹಾಪ್ರಸಾದ ಜರುಗುವುದು. ಅ.23, ಮಹಾನವಮಿಯಂದು ಶ್ರೀದೇವಿ ಪುರಾಣ ಮಂಗಲೋತ್ಸವ, ಅ.24 ವಿಜಯದಶಮಿ ದಿನದಂದು ಸಾಯಂಕಾಲ 5 ಗಂಟೆಗೆ ಪಾಲಕಿ ಉತ್ಸವ ದೇವಸ್ಥಾನದ ಆವರಣದಲ್ಲಿ ಜರುಗುವದು. ನಂತರ ಶಮಿವೃಕ್ಷದ ಪೂಜೆ, ಬನ್ನಿ ಮುಡಿಯುವ ಕಾರ್ಯಕ್ರಮ ನಡೆಯುವುದು.

ಸಮಾಜ ಬಾಂಧವರು ಸಹಕುಟುಂಬ-ಪರಿವಾರದೊಂದಿಗೆ ಆಗಮಿಸಿ ಶ್ರೀ ಜಗದಂಬಾ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಸಂಘದ ಅಧ್ಯಕ್ಷ ವಿನೀತಕುಮಾರ ವ್ಹಿ.ಜಗತಾಪ, ಗೌರವ ಕಾರ್ಯದರ್ಶಿ ಶಿವಾಜಿ ವಾಯ್. ಗ್ವಾರಿ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

# ನಿಧನ ವಾರ್ತೆ

## ಶ್ರೀಮತಿ ಪ್ರಮಿಳಾಬಾಯಿ ಆರ್. ಕಬಾಡಿ



**ಬೆಟಗೇರಿ:** ಸ್ಥಳೀಯ ಕಬಾಡಿ ರೋಡ್ ನಿವಾಸಿ ಶ್ರೀಮತಿ ಪ್ರಮಿಳಾಬಾಯಿ ರಾಮಕೃಷ್ಣಸಾ ಕಬಾಡಿ (76) ದಿ. 13 ರಂದು ಮುಂಜಾನೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಮೃತರಿಗೆ ಇಬ್ಬರು ಪುತ್ರರು ಹಾಗೂ ಅಪಾರ ಬಂದು- ಬಳಗವಿದ್ದು, ಮೃತರ ಅಂತಿಮಯಾತ್ರೆ ದಿ. 13 ರ ಸಾಯಂಕಾಲ ಜರುಗಿತು.

### ಜೆಎಸ್‌ಎಸ್ ಡಿಆರ್‌ಎಚ್ ಸಭಾಭವನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಡಾ.ವೀರಣ್ಣ ರಾಜೂರ

# ಶರಣರ ಮೌಲ್ಯಗಳು ಇಂದಿಗೂ ಪ್ರಸ್ತುತ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಪರಿಷತ್ತು ಧಾರವಾಡ, ಜೆಎಸ್‌ಎಸ್ ಶ್ರೀ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ 'ಶರಣರ ಮೌಲ್ಯಗಳ ಪ್ರಸ್ತುತತೆ' ಕುರಿತು ಒಂದು ದಿನದ ವಿಚಾರ ಸಂಕಿರಣ ಜೆಎಸ್‌ಎಸ್ ಡಿಆರ್‌ಎಚ್ ಸಭಾಭವನದಲ್ಲಿ ಜರುಗಿತು.



ಜ್ಯೋತಿ ಬೆಳಗಿಸಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಜನತಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಅಜಿತ್ ಪ್ರಸಾದ್, ಕನ್ನಡ ಮಾಧ್ಯಮದಲ್ಲಿ ಮಾತ್ರ ಬದುಕನ್ನು ಸಹಜವಾಗಿ ಅರಳಿಸಿಕೊಳ್ಳಬಹುದು. ಆಂಗ್ಲ ಮಾಧ್ಯಮದಲ್ಲಿ ಓದಿದರೆ ಅಂತರಂಗದ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುವುದಿಲ್ಲ. ಇದು ಗೊತ್ತಿದ್ದರೂ ನಾವೆಲ್ಲ ಇಂಗ್ಲೀಷ್‌ನ ಬೆನ್ನು ಹತ್ತಿ ಹೊರಟಿರುವುದು ವಿಷಾದನೀಯ. ಶೈಕ್ಷಣಿಕ ನಿಯಮಾವಳಿಗಳನ್ನು ರೂಪಿಸುವವರು ಇದನ್ನು ಗಮನಿಸಬೇಕೆಂದು ನುಡಿದರು.

ಶರಣರ ಮೌಲ್ಯಗಳ ಪ್ರಸ್ತುತತೆ ಬಗ್ಗೆ ವಿಶೇಷ ಉಪನ್ಯಾಸ ನೀಡಿದ ಹಿರಿಯ ಸಾಹಿತಿ ಡಾ.ವೀರಣ್ಣ ರಾಜೂರ, 12ನೇ ಶತಮಾನದಲ್ಲಿ ಕರ್ನಾಟಕದ ಕಲ್ಯಾಣದಲ್ಲಿ ಮಾನವೋದ್ಧಾರದ ಕ್ರಾಂತಿ ನಡೆಯಿತು. ಅಂದು ನಡೆದ ಮಾನವ ಚಳುವಳಿಯ ನೇತೃತ್ವ ವಹಿಸಿದವರು ಬಸವಣ್ಣನವರು. ಅವರ ಅನುಯಾಯಿಗಳಾದವರೆಲ್ಲ ಕಾಯಕ ಜೀವಿಗಳು. ಆ ಮೂಲಕ ಒಂದು ಪರ್ಯಾಯ ಸಂಸ್ಕೃತಿಯನ್ನು ನಿರ್ಮಿಸಿದರು. ಅದರ ಮೂಲ ಉದ್ದೇಶ ಸಮಾನ ಸಮಾಜ ತರುವುದಾಗಿತ್ತು. ಆದ್ದರಿಂದ, ಶರಣರ ಕಾಯಕ ದಾಸೋಹ ಮತ್ತು ಸಮಾನತೆಯ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಡಾ.ವೀರಣ್ಣ ರಾಜೂರ ಹಾಗೂ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರನ್ನು , ಕವಿಕಾಶಿ ಸಂಘದ ಅಧ್ಯಕ್ಷ ಡಾ.ಮಂಜುನಾಥ, 2020ರಿಂದ ನಿವೃತ್ತರಾದ ಕನ್ನಡ ಪ್ರಾಧ್ಯಾಪಕರನ್ನು ಮತ್ತು ಪಿಎಚ್.ಡಿ ಪದವಿ ಪಡೆದವರನ್ನು, ವಿವಿಧ ರಾಜ್ಯ, ರಾಷ್ಟ್ರ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಅಧ್ಯಾಪಕರ ಪರಿಷತ್ತಿನ ಕಾರ್ಯಾಧ್ಯಕ್ಷರಾದ ಡಾ.ಮಹಾದೇವಿ ಹಿರೇಮಠ, ಕನ್ನಡ ಅಧ್ಯಾಪಕರ ಸಮಸ್ಯೆ ಸವಾಲು ಮತ್ತು ಆಡಳಿತಗಳನ್ನು ಹೇಳಿ ಅವುಗಳ ಬಗ್ಗೆ ಚರ್ಚೆ ಸಾಕಷ್ಟು ಚರ್ಚೆಗಳು ನಡೆಯಬೇಕು ಎಂದರು. ಅಧ್ಯಕ್ಷತೆಯನ್ನು ಕನ್ನಡ ಮೌಲ್ಯಮಾಪನ ಕೇಂದ್ರದ ಚೇರಮನ್, ಕನ್ನಡ ಅಧ್ಯಾಪಕರ ಪರಿಷತ್ತಿನ ಅಧ್ಯಕ್ಷ ಡಾ. ಪ್ರಭು ಗಂಜಿಹಾಳ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ.ಪುಷ್ಪ ಬಸನಗೌಡರ, ಮೌಲ್ಯಮಾಪನ ಕೇಂದ್ರದ ಡೆಪ್ಯೂಟಿ ಚೇರಮನ್ ಪ್ರೊ. ವಿ.ಎಮ್ ಗುರುಮಠ, ಡಾ.ವೈ.ಎಂ ಭಜಂತ್ರಿ, ಸಂಯೋಜಕ ಡಾ.ಜಿನದತ್ತ ಹಡಗಲಿ, ಕೋಶಾಧ್ಯಕ್ಷ ಡಾ.ಎಸ್.ವಿ ಮನಗುಂಡಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಸನ್ಮಾನ ಕಾರ್ಯಕ್ರಮವನ್ನು ಸಹಕಾರ್ಯದರ್ಶಿ ಡಾ.ಚಾಮರಾಜ ಕಮ್ಮಾರ ನಡೆಸಿಕೊಟ್ಟರು. ಪ್ರೊ. ಮಾದರ ಪ್ರಾರ್ಥಿಸಿದರು. ಕಾರ್ಯದರ್ಶಿ ಡಾ.ಎಸ್.ಎಸ್ ದೊಡ್ಡಮನಿ ನಿರೂಪಿಸಿದರು. ಡಾ.ಮನಗುಂಡಿ ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka